
# ನಾವು

## ಕ್ರಿಸ್ತನಲ್ಲಿ ಯಾರಾಗಿದ್ದೇವೆ



**ಯೇಸುಕ್ರಿಸ್ತನಲ್ಲಿ, ದೇವರು ನಮಗಾಗಿ ಮಾಡಿದ್ದವುಗಳನ್ನು ತಿಳಿಯುವುದು**

ಆಶಿಷ್ ರಾಯ್‌ಚೂರ್

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಡಿಸೆಂಬರ್ 2017

ಪುನರ್ ಪರಿಶೀಲಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಥ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Who we are in Christ)

# ನಾವು **ಕ್ರಿಸ್ತನಲ್ಲಿ** ಯಾರಾಗಿದ್ದೇವೆ

# ವಿಷಯಸೂಚಿ


**1. ಕ್ರಿಸ್ತನೊಂದಿಗೆ ಇರುವ ನಮ್ಮ ಐಕ್ಯತೆಯನ್ನು ಅರ್ಥಮಾಡಿಕೊಳ್ಳುವುದು** 01

1.1 ನಾವು ಕ್ರಿಸ್ತನಲ್ಲಿದ್ದೇವೆ 01

1.2 ಕ್ರಿಸ್ತನಲ್ಲಿ ನಾವು ಹೇಗೆ ಸೇರಲ್ಪಟ್ಟೆವು? 02

1.3 ಕ್ರಿಸ್ತನಲ್ಲಿ ಇರುವಂತದ್ದು ಎಂಬುದರ ಅರ್ಥವೇನು? 03

1.4 ಕ್ರಿಸ್ತನಲ್ಲಿ ಇರುವುದರಿಂದ ಉಂಟಾಗುವ ಪರಿಣಾಮಗಳು 04

1.5 ಈ ಸತ್ಯವುಳ್ಳ ಸಂಗತಿಯು ನಿಮ್ಮನ್ನು ಹೇಗೆ ಬದಲಾಯಿಸಲು ಸಾಧ್ಯ? 05

**2. ನೂತನವಾದ ಸೃಷ್ಟಿ** 07

2.1 ನಾವು ಹಿಂದೆ ಏನು ಹಾಗಿರರಲಿಲ್ಲವೋ ಈಗ ಹಾಗಿದ್ದೇವೆ 07

2.2 ನಾವು ಈಗ ನೂತನ ಸೃಷ್ಟಿಯಾಗಿರುವಂಥದ್ದು ಆತ್ಮದಲ್ಲಿ ಮಾತ್ರ– ದೇಹದಲ್ಲಿ ಮತ್ತು ಮನಸ್ಸಿನಲ್ಲಿ ಅಲ್ಲ. 08

2.3 ನಾವು ನೂತನ ಸೃಷ್ಟಿಯಾಗಿರುವಂತದ್ದು ದೇವರ ಸ್ವಾರೂಪ್ಯದಲ್ಲಿ 09

2.4 ನಮ್ಮೊಳಗಿರುವ ಈ ನೂತನ ಮನುಷ್ಯನು ಜ್ಞಾನದಲ್ಲಿ ನೂತನವಾಗಬೇಕು 10

2.5 ಹಳೆಯ ಸಂಗತಿಗಳು ಹೊರಟು ಹೋಗಿವೆ 11

**3. ನೀತಿವಂತರೆಂಬ ನಿರ್ಣಯವನ್ನು ಹೊಂದಿದ್ದೇವೆ** 12

3.1 ಆತನ ಕೃಪೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ 12

3.2 ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ 13

3.3 ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ 14

**4. ಪ್ರತಿಷ್ಠಿತರೂ ಮತ್ತು ಪರಿಶುದ್ಧರು** 17

4.1 ನೀವು ಕ್ರಿಸ್ತನಲ್ಲಿ ಪ್ರತ್ಯೇಕಿಸಲ್ಪಟ್ಟಿದ್ದಿರಿ 17

4.2 ವಿಶ್ವಾಸಿಗಳು ಶುದ್ದೀಕರಣಗೊಂಡವರು 18

4.3 ಪವಿತ್ರೀಕರಣ – ಪ್ರಸ್ತುತ ನಿರಂತರ ಪ್ರಕ್ರಿಯೆ 18

**5. ಆಶೀರ್ವದಿಸ್ಪಟ್ಟವರು, ಸಮೃದ್ಧಿವುಳ್ಳವರು, ಮತ್ತು ಜಯಶಾಲಿಗಳು** 22

5.1 ಆಶೀರ್ವದಿಸಲ್ಪಟ್ಟವರು 22

5.2 ಸಮೃದ್ಧಿವುಳ್ಳವರು 23

5.3 ಜಯಶಾಲಿಗಳು 23

**6. ಕ್ರಿಸ್ತನೊಂದಿಗೆ ಗುರುತಿಸಲ್ಪಟ್ಟಿದ್ದೀರಿ–ಶಿಲುಬೆಗೆ ಹಾಕಲ್ಪಟ್ಟಿದ್ದೀರಿ, ಹೂಣಲ್ಪಟ್ಟಿದ್ದೀರಿ, ಜೀವಿಸಲ್ಪಟ್ಟಿದ್ದೀರಿ, ಎಬ್ಬಿಸಲ್ಪಟ್ಟಿದ್ದೀರಿ ಮತ್ತು ಕೂಡ್ರಿಸಲ್ಪಟ್ಟಿದ್ದೀರಿ** 25

6.1 ಕ್ರಿಸ್ತನೊಂದಿಗೆ ಕ್ರೂಜೆಗೆ ಹಾಕಲ್ಪಟ್ಟಿದ್ದೇವೆ–ಪಾಪಧೀನವಾದ ಶರೀರ ಅಳಿದುಹೋಯಿತು 27

6.2 ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದೇವೆ–ಹಳೆಯ ಜೀವಿತದಿಂದ ಬೇರ್ಪಟ್ಟಿದ್ದೇವೆ 28

6.3 ಕ್ರಿಸ್ತನೊಂದಿಗೆ ಸತ್ತವರಾದ ನಾವು ಬದುಕುವವರಾಗಿದ್ದೇವೆ– ನೂತನವಾದ ಜೀವಿತ ಕೊಡಲ್ಪಟ್ಟಿದೆ 29

6.4 ಕ್ರಿಸ್ತನೊಂದಿಗೆ ಪರಲೋಕದೊಳಗೆ ಎಬ್ಬಿಸಲ್ಪಟ್ಟಿದ್ದೇವೆ –ಪ್ರಸ್ತುತ ಕಾಲದ/ಪ್ರಪಂಚದಿಂದ ಪ್ರತ್ಯೇಕಿಸಲ್ಪಟ್ಟಿದ್ದೇವೆ 29

6.5 ಕ್ರಿಸ್ತನೊಂದಿಗೆ ಕೂಡ್ರಿಸಲ್ಪಟ್ಟಿದ್ದೇವೆ–ಅತನೊಂದಿಗೆ ಆಳುವುದಕ್ಕೂ ಮತ್ತು ರಾಜ್ಯಭಾರಮಾಡುವುದಕ್ಕೂ ಸ್ಥಾನಮಾನಗಳು ದೊರಕಿವೆ 30

**7. ವಿಮೋಚಿಸಲ್ಪಟ್ಟಿದ್ದೇವೆ ಮತ್ತು ಬಿಡುಗಡೆ ಹೊಂದಿದ್ದೇವೆ** 31

7.1 ನಾವು ಯಾವುದರಿಂದ ವಿಮೋಚಿಸಲ್ಪಟ್ಟಿದ್ದೇವೆ? 33

7.2 ದೇವರಿಗೆ ಪುನಃಸ್ಥಾಪಿಸಲ್ಪಟ್ಟಿದ್ದೇವೆ 34

7.3 ಕ್ರಿಸ್ತನು ನಮ್ಮ ವಿಮೋಚನೆಯಾಗಿದ್ದಾನೆ 34

**8. ಸ್ವತಂತ್ರರಾಗಿದ್ದೇವೆ** 36

8.1 ಧರ್ಮಶಾಸ್ತ್ರದ ದಾಸತ್ವದಿಂದ ಸ್ವತಂತ್ರತೆ 36

8.2 ದುರ್ಬಲ ಮತ್ತು ನಿಷ್ಪ್ರಯೋಜಕ ಆಚರಣೆಗಳಿಂದ ಸ್ವತಂತ್ರತೆ 37

8.3 ಮಾನವ ನಿರ್ಮಿತ ನಿಯಮಗಳು ಮತ್ತು ಕಲ್ಪನೆಗಳಿಂದ ಸ್ವತಂತ್ರತೆ 37

8.4 ನಿಮಗಿರುವ ಸ್ವತಂತ್ರತೆಯಲ್ಲಿ ಸ್ಥಿರವಾಗಿ ನಿಲ್ಲಿರಿ 38

8.5 ನಿಮ್ಮ ಸ್ವತಂತ್ರತೆಯನ್ನು ದುರುಪಯೋಗ ಮಾಡಬೇಡಿ 38

8.6 ನಿಮ್ಮ ಸ್ವತಂತ್ರತೆಯನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿರಿ 39

**9. ಆತನ ದೇಹದ ಅಂಗಗಳು** 42

9.1 ಆತನ ದೇಹದಲ್ಲಿ ಒಂದೇ ಆಗಿದ್ದೇವೆ 42

9.2 ಯಾವುದೇ ಭೇದ–ಭಾವವಿಲ್ಲ 42

9.3 ಪರಸ್ಪರಾವಲಂಭಿಗಳು 43

9.4 ನಾವು ಒಟ್ಟಾಗಿ ಕ್ರಿಸ್ತನನ್ನು ಪ್ರತಿಬಿಂಬಿಸುತ್ತವೆ 44

9.5 ದೇವರು ವಾಸಿಸುವ ಸ್ಥಳವಾಗಿ ನಾವು ಒಟ್ಟಾಗಿ ಕಟ್ಟಲ್ಪಟ್ಟಿದ್ದೇವೆ 44

9.6 ಸ್ಥಳೀಯ ಸಭೆಗಳು ಕ್ರಿಸ್ತನಲ್ಲಿ ಇವೆ 45

**10. ಆತನಲ್ಲಿರುವ ನಮ್ಮ ಬಾಧ್ಯತೆ** 46

10.1 ದೇವರ ಮಕ್ಕಳು 46

10.2 ಜೀವವಾಗ್ದಾನದ ಬಾಧ್ಯತೆ 46

10.3 ನಾವು ಕ್ರಿಸ್ತನೊಂದಿಗೆ ಬಾಧ್ಯಸ್ತರಾಗಿದ್ದೇವೆ 47

10.4 ಕ್ರಿಸ್ತನಲ್ಲಿರುವ ದೇವರ ಪ್ರೀತಿಯಲ್ಲಿ ಬಾಧ್ಯಸ್ತರಾಗಿದ್ದೇವೆ 47

10.5 ಪವಿತ್ರಾತ್ಮನೊಂದಿಗೆ ಮುದ್ರೆ ಹೊಂದಿದ್ದೇವೆ 48

10.6 ಕ್ರಿಸ್ತನಲ್ಲಿ ಸಂರಕ್ಷಿಸಲ್ಪಟ್ಟಿದ್ದೇವೆ 48

10.7 ನಾವು ಅತನಲ್ಲಿ ಸ್ಥಿರವಾಗಿ ನೆಲೆಗೊಂಡಿದ್ದೇವೆ 49

10.8 ದೇವರ ನಿತ್ಯತ್ವದ ಉದ್ದೇಶದಲ್ಲಿ ಪಾಲುಗಾರರಾಗಿದ್ದೇವೆ 49

10.9 ದೇವರ ಜ್ಞಾನವಾಗಿದ್ದೇವೆ 49

10.10 ದೇವರ ಸರ್ವಸಂಪೂರ್ಣತೆ 50
10.11 ಎಲ್ಲಾ ವಾಗ್ದಾನಗಳಿಗೆ ಹೌದು ಎನ್ನುವುದು 51
10.12 ಯಾವುದೇ ಕುರುಡತನ ಇಲ್ಲ 51
10.13 ಕ್ರಿಸ್ತನಲ್ಲಿರುವ ಸರಳತೆ 51
10.14 ಅಬ್ರಹಾಮನ ಒಡಂಬಡಿಕೆಯಲ್ಲಿ ವಾರಸುದಾರರಾಗಿದ್ದೇವೆ. 52
10.15 ಶಕ್ತಗೊಳಿಸುವ ಕೃಪೆ 53
10.16 ಪುನರುತ್ಥಾನ 53

**11. ಕ್ರಿಸ್ತನಲ್ಲಿರುವ ಜೀವಿತವನ್ನು ಜೀವಿಸುವುದು** 54
11.1 ಆತನಲ್ಲಿ ನಡೆಯಬೇಕು 55
11.2 ಆತನಲ್ಲಿ ಬೇರೂರಿರಬೇಕು 57
11.3 ಆತನಲ್ಲಿ ನಿರ್ಮಿಸಲಾಗಿದೆ 58
11.4. ಕ್ರಿಸ್ತನಲ್ಲಿ ನೆಲೆಯಾಗಿರುವುದು 59
11.5. ಕ್ರಿಸ್ತ ಯೇಸುವಿನಲ್ಲಿ ನಿಮಗೆ ಇರುವ ಉತ್ತಮ ವಿಷಯಗಳನ್ನು ಗುರುತಿಸುವುದು. 60

**ಕ್ರಿಸ್ತನಲ್ಲಿ ನನ್ನ ಚಿತ್ರಣ** 62

# ಅಧ್ಯಾಯ 1

# ಕ್ರಿಸ್ತನೊಂದಿಗೆ ಇರುವ ನಮ್ಮ ಐಕ್ಯತೆಯನ್ನು ಅರ್ಥಮಾಡಿಕೊಳ್ಳುವುದು

## 1.1. ನಾವು ಕ್ರಿಸ್ತನಲ್ಲಿದ್ದೇವೆ

ಯೋಹಾನ 14:19,20

**ಇನ್ನು ಸ್ವಲ್ಪ ಕಾಲವಾದ ಮೇಲೆ ಲೋಕವು ನನ್ನನ್ನು ನೋಡುವುದಿಲ್ಲ. ಆದರೆ ನೀವು ನನ್ನನ್ನು ನೋಡುವಿರಿ; ನಾನು ಬದುಕುವುದರಿಂದ ನೀವೂ ಬದುಕುವಿರಿ. ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವುದನ್ನು ನೀವು ಆ ದಿನದಲ್ಲಿ ತಿಳಿದುಕೊಳ್ಳುವಿರಿ.**

ಒಂದು ಸಮಯ ಬರುತ್ತದೆ ಆಗ ಆತನ ಶಿಷ್ಯರು ಕ್ರಿಸ್ತನೊಂದಿಗೆ ಅವರಿಗೆ ಇರುವ ಐಕ್ಯತೆಯ ಬಗ್ಗೆ ಪ್ರಕಟಣೆಯನ್ನು ಹೊಂದಿಕೊಳ್ಳುವರು ಎಂದು ಕರ್ತನಾದ ಯೇಸು ಮೊದಲೇ ತಿಳಿಸಿದ್ದನು. ಈ ಐಕ್ಯತೆಯ ಬಗ್ಗೆ ಇನ್ನು ಹೆಚ್ಚಾಗಿ ಸಭೆಗೆ ಅಪೊಸ್ತಲನಾದ ಪೌಲನ ಮೂಲಕ ಮತ್ತು ಇತರರು ಹೊಸ ಒಡಂಬಡಿಕೆಯಲ್ಲಿ ಈ ವಿಷಯವಾಗಿ ಬರೆಯುವುದರ ಮೂಲಕ ಬಹಿರಂಗಪಡಿಸಿದ್ದಾರೆ. ಪತ್ರಿಕೆಗಳ ನಾನಾಭಾಗಗಳಲ್ಲಿ ನಾವು ಕ್ರಿಸ್ತನಲ್ಲಿ ಏನಾಗಿದ್ದೇವೆ ಎಂಬುದರ ವಿಷಯವಾಗಿ ನಮಗೆ ಪ್ರಕಟಣೆಯಾಗಿರುವುದನ್ನು ನೋಡುತ್ತೇವೆ.

ಯೋಹಾನ 15:1–5

**ನಾನೇ ನಿಜವಾದ ದ್ರಾಕ್ಷೇಬಳ್ಳಿ. ನನ್ನ ತಂದೆಯು ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ; ಫಲ ಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿ ಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ.**

ದ್ರಾಕ್ಷೇಬಳ್ಳಿ ಮತ್ತು ಅದರ ಕೊಂಬೆಗಳ ವಿಷಯವಾದ ಒಂದು ಉದಾಹರಣೆಯನ್ನು ಉಪಯೋಗಿಸುವುದರ ಮೂಲಕ ಕರ್ತನಾದ ಯೇಸು ಕ್ರಿಸ್ತನು ಆತನ ಜನರೊಂದಿಗೆ ಆತನಿಗಿರುವ ಸಂಬಂಧದ ಬಗ್ಗೆ ತಿಳಿಸಿದ್ದಾನೆ.

- ನಾವು ಆತನಿಗೆ ಜೋಡಣೆಯಾಗಿದ್ದೇವೆ
- ಆತನಲ್ಲಿ ಇರುವಂತದ್ದು ನಮ್ಮಲ್ಲಿಯೂ ಇದೆ.
- ನಾವು ದ್ರಾಕ್ಷೇಬಳ್ಳಿಯ ಒಂದು ಅವಿಭಾಜ್ಯ ಅಂಗವಾಗಿದ್ದೇವೆ–ನಾವು ಕ್ರಿಸ್ತನ ಜೀವಿತವನ್ನು ಪ್ರದರ್ಶಿಸುತ್ತೇವೆ.

2 ಕೊರಿಂಥದವರಿಗೆ 5:17

**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿಯಲ್ಲಾ ಹೋಗಿ ಎಲ್ಲಾ ನೂತನವಾಯಿತು.**

ಗ್ರೀಕ್ ಬಾಷೆಯಲ್ಲಿ (ಕೈನೊಸ್) **"ಹೊಸದಾದ"** ಅಂದರೆ = ಉಪಯೋಗಿಸದೆ ಇರುವಂತದ್ದು, ಹೊಸದಾದ, ನೂತನವಾದ ಸತ್ವ, ಸ್ವಭಾವ ಮತ್ತು ಯೋಗ್ಯವಾದ ಗುಣಮಟ್ಟವನ್ನು ಹೊಂದಿರುವಂತದ್ದು.

## 1.2. ಕ್ರಿಸ್ತನಲ್ಲಿ ನಾವು ಹೇಗೆ ಸೇರಲ್ಪಟ್ಟೆವು?

1 ಕೊರಿಂಥದವರಿಗೆ 1:30

**ನೀವು ಕ್ರಿಸ್ತ ಯೇಸುವಿನಲ್ಲಿರುವುದು ಆತನಿಂದಲೇ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧಿಕರಣ ವಿಮೋಚನೆಗಳಿಗೆ ಕಾರಣನೂ ಆದನು.**

ಈ ವಚನವು ದೇವರಿಂದ ಪ್ರಾರಂಭಗೊಂಡ ಉಪಕ್ರಮವಾಗಿದೆ. ಇವೆಲ್ಲವನ್ನು ದೇವರೇ ಮಾಡಿದ್ದಾನೆ. ಇದನ್ನು ನಾವು ಸಂಪಾದಿಸಲಿಲ್ಲ; ಇದನ್ನು ನಾವು ಹೊಂದಿಕೊಳ್ಳುವಷ್ಟು ಯೋಗ್ಯತೆಯಾಗಲಿ ಅಥವಾ ಒಳ್ಳೆಯತನವಾಗಲಿ ನಮ್ಮಲ್ಲಿ ಇರಲಿಲ್ಲ. ಇದರ ವಿಷಯವಾಗಿ ನಾವು ಯೋಚಿಸಲೂ ಇಲ್ಲ. ಮಾನವರ ರಕ್ಷಣೆಗಾಗಿ ಪರಲೋಕದಿಂದ ದೇವರು ಒದಗಿಸಿರುವ ಒಬ್ಬನೇ ಕರ್ತನಾದ ಯೇಸು ಕ್ರಿಸ್ತನ ಮೇಲೆ ನಂಬಿಕೆಯಿಡುವ ಪ್ರತಿಯೊಬ್ಬರು ಕ್ರಿಸ್ತ ಯೇಸುವಿನಲ್ಲಿ ಸೇರಿಸಲ್ಪಡಬೇಕೆಂಬುದನ್ನು ದೇವರು ಮೊದಲೇ ತಿರ್ಮಾನಿಸಿದ್ದನು. ನಾವು ಕ್ರಿಸ್ತ ಯೇಸುವಿನಲ್ಲಿ ಇದ್ದೇವೆ. ಇದು ವರ್ತಮಾನ ಕಾಲದ ಸತ್ಯಾಂಶವಾಗಿದೆ. ಇದು ಆತ್ಮಸಂಬಂದವಾದ ನಿಜಾಂಶವಾಗಿದೆ.

ಎಫೆಸದವರಿಗೆ 2:10

**ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು.**

ದೇವರು ನಮ್ಮನ್ನು ಕ್ರಿಸ್ತನೊಂದಿಗೆ ಸೇರಿಸಿದಾಗ ದೈವಿಕವಾದಂತ ದೇವರ ಸೃಷ್ಠಿಯ ಶಕ್ತಿಯು ನಮ್ಮಲ್ಲಿ ಕಾರ್ಯಸಾಧಕವಾಯಿತು. ದೈವಿಕವಾದಂತ ದೇವರ ಸೃಷ್ಠಿಯ ಶಕ್ತಿಯಿಂದಲೇ ನಾವು ಕ್ರಿಸ್ತನೊಂದಿಗೆ ಈ ಐಕ್ಯತೆಯನ್ನು ಹೊಂದಿಕೊಂಡಿದ್ದೇವೆ.

- ನಾವು ಹಿಂದೆ ಏನು ಆಗಿರಲಿಲ್ಲವೋ ಈಗ ಆಗಿದ್ದೇವೆ.
- ಹಿಂದೆ ಏನು ನಮ್ಮಲ್ಲಿ ಜೀವಿಸಲಿಲ್ಲವೋ ಈಗ ಜೀವಿಸುತ್ತಾ ಇದೆ.
- ನನ್ನಲ್ಲಿರುವ ಹಳೆಯ ಸ್ವಭಾವವನ್ನು ತೆಗೆದು ಹಾಕಿ ದೇವರು ನನ್ನನ್ನು ಕ್ರಿಸ್ತನಲ್ಲಿ ಇಡಲಿಲ್ಲ. ಬದಲಾಗಿ, ದೇವರು ನನ್ನನ್ನು ನೂತನ ಸೃಷ್ಠಿಯನ್ನಾಗಿ ಕ್ರಿಸ್ತನಲ್ಲಿ ಇಟ್ಟಿದ್ದಾನೆ. ನಾನು ಕ್ರಿಸ್ತ ಯೇಸುವಿನಲ್ಲಿ ಸೇರಲ್ಪಟ್ಟಾಗ ನಾನು ಒಬ್ಬ ನೂತನ ಸೃಷ್ಠಿಯಾಗಿ ಮಾರ್ಪಾಟು ಹೊಂದಿದ್ದೇನೆ.

1 ಕೊರಿಂಥದವರಿಗೆ 12:13

**ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು.**

ನಾವು ಹೊಸದಾಗಿ ಹುಟ್ಟಿದಾಗ ದೇವರಾತ್ಮನಿಂದ ಹುಟ್ಟಿದವರಾಗಿದ್ದೇವೆ. “ಯೇಸು ಹೇಳಿದ್ದು, ನಾನು ನಿನಗೆ ನಿಜ ನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದ ಮತ್ತು ಆತ್ಮನಿಂದ ಹುಟ್ಟದೆ ಹೋದರೆ ಅವನು ದೇವರ ರಾಜ್ಯವನ್ನು ಕಾಣಲಾರನು.” (ಯೋಹಾನ 3:5). ನಾವು ಹೊಸದಾಗಿ ಹುಟ್ಟುವ ಅಥವಾ ರಕ್ಷಣೆಹೊಂದಿಕೊಳ್ಳುವ ಸಮಯದಲ್ಲಿ, ನಮ್ಮನ್ನು ಪುನರುಜ್ಜೀವನಗೊಳಿಸಿ, ನೂತನ ಸೃಷ್ಠಿಗಳನ್ನಾಗಿ ಮಾಡಿದಾತನು ಪರಿಶುದ್ಧಾತ್ಮ ದೇವರು. ಆಮೇಲೆ ಆತನು ನಮ್ಮನ್ನು ತೆಗೆದುಕೊಂಡು ಕ್ರಿಸ್ತನ ದೇಹದಲ್ಲಿ ಮುಳುಗಿಸಿ, ಕ್ರಿಸ್ತನೊಂದಿಗೆ ನಮ್ಮನ್ನು ಐಕ್ಯತೆಗೆ ಬರಮಾಡಿದ್ದಾನೆ.

## 1.3. ಕ್ರಿಸ್ತನಲ್ಲಿ ಇರುವಂತದ್ದು ಎಂಬುದರ ಅರ್ಥವೇನು?

1 ಕೊರಿಂಥದವರಿಗೆ 6:17

**ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಅತ್ಮವಾಗಿದ್ದಾನೆ.**

ಇದರ ಆರ್ಥವೇನೆಂದರೆ ಕ್ರಿಸ್ತನೊಂದಿಗೆ ನಮ್ಮ ಐಕ್ಯತೆಯು ಒಂದು ಆತ್ಮಿಕವಾದ ಸಂಯೋಗವಾಗಿದೆ. ನಮ್ಮ ಆತ್ಮವು ಆತನೊಂದಿಗೆ ಜೋಡಣೆಯಾಗಿದೆ. ಹೀಗಿರುವುದರಿಂದ ಕ್ರಿಸ್ತನೊಂದಿಗಿರುವ ನಮ್ಮ ಐಕ್ಯತೆಯ ಪರಿಣಾಮ ನಮ್ಮ ಅತ್ಮನ ಹೊರಗಡೆಯಿಂದ ಕೆಲಸ ನಿರ್ವಯಿಸಿ, ನಮ್ಮ ದೇಹ ಮತ್ತು ಪ್ರಾಣದ ಮೇಲೆ ಪ್ರಭಾವ ಬೀರುತ್ತದೆ.

ಕ್ರಿಸ್ತನೊಂದಿಗೆ ನಮಗಿರುವ ಆತ್ಮಿಕವಾದ ಐಕ್ಯತೆಯೊಂದಿಗೆ ಮತ್ತು ದೈಹಿಕವಾದ ಗಂಡ ಮತ್ತು ಹೆಂಡತಿಯ ಸಂಯೋಗದ ನಡುವೆ ಒಂದು ಸಮಾಂತರದ ಗೆರೆಯನ್ನು ಎಳೆಯಬಹುದು (1 ಕೊರಿಂಥದವರಿಗೆ 6:17). ಗಂಡ ಮತ್ತು ಹೆಂಡತಿಯ ನಡುವೆ ಇರುವ ಸಂಯೋಗವು ಅವರಲ್ಲಿ ಯಾರದರೊಬ್ಬರು ಜೀವಿಸಲು ನಿಲ್ಲಿಸಿಬಿಟ್ಟಿದ್ದಾರೆ ಎಂದರ್ಥವಲ್ಲ ಅಥವಾ ಅವರು ಹೇಗೋ ತಮ್ಮ ವ್ಯಕ್ತಿತ್ವದ ವೈಶಿಷ್ಠತೆಯನ್ನು ಕಳೆದುಕೊಂಡಿದ್ದಾರೆ ಎಂದರ್ಥವಲ್ಲ. ಇದಕ್ಕೆ ಬದಲಾಗಿ ಒಂದು ಅಪ್ಪಟವಾದ ಸ್ವರೂಪದಲ್ಲಿ, ಅವರ ಐಕ್ಯತೆಯು ಈ ಮುಂದಿನ ವಿಷಯಗಳಲ್ಲಿ ನಿದರ್ಶನ ತೋರುತ್ತದೆ:

- ಅವರು ಒಬ್ಬರನೊಬ್ಬರು ಪ್ರತಿಬಿಂಬಿಸುವ ಕಾರಣ ಒಂದೇ ನಾಮದೇಯವುಳ್ಳರಾಗಿರುವರು.
- ಅವರ ಜೀವಿತದಲ್ಲಿ ಮಾಡಿದ ತಿರ್ಮಾನಗಳ ಮೇಲೆ, ಸಾಧಿಸಿದ ವಿಷಯಗಳ ಮೇಲೆ, ಮತ್ತು ಇತರೆ, ಇವುಗಳಲ್ಲಿ ಏಕಮತ ಮತ್ತು ಸಾಮರಸ್ಯ ಇರುತ್ತದೆ.
- ಅವರ ಗುರಿ, ಉದ್ದೇಶ ಮತ್ತು ಮನೋಭಾವನೆಗಳಲ್ಲಿ ಪರಸ್ವರ ಹಂಚಿಕೆಯಿಂದಿರುತ್ತಾರೆ. ಒಬ್ಬರ ಪರಿಣಾಮ ಇನ್ನೊಬ್ಬರ ಮೇಲೆ ಪ್ರಭಾವ ಬೀರುತ್ತದೆ.
- ಅವರಲ್ಲಿ ಪರಸ್ವರವಾದ ಸಮೃದ್ದಿ ನೆಲೆನೊಂಡಿರುತ್ತದೆ. ಒಬ್ಬನ ಬಲಹೀನತೆ ಇನ್ನೊಬ್ಬನ ಶಕ್ತಿಯಲ್ಲಿ ಕಳೆದು ಹೋಗುತ್ತದೆ.
- ಒಬ್ಬನಿಗೆ ಸಂಬಂದಿಸಿದ್ದು ಇನ್ನೊಬ್ಬರಿಗೂ ಸಂಬಂದಿಸಿದೆ. ಅವರು ಜೊತೆ ಕೆಲಸದವರಾಗಿದ್ದಾರೆ.
- ಅವರಲ್ಲಿ ಆಳವಾದ ಸಹಬೋಗ, ಅನ್ಯೋನ್ಯತೆ, ಸಹಬಾಳ್ವೆ, ಮತ್ತು ಆತ್ಮೀಯತೆ ಇರುತ್ತದೆ. ಇದು ಹೊರಗಡೆಯಿಂದ ಯಾರಿಗೂ ತಿಳಿಯದೇ ಇರಬಹುದು.

ನಮಗೆ ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ಐಕ್ಯತೆ ಅಂದರೆ ಅತ್ಮದಲ್ಲಿ ಆತನೊಂದಿಗೆ ಒಂದೇ ಆಗಿರುವುದರ ಬಗ್ಗೆ ಈ ಮೇಲಿನ ಎಲ್ಲಾ ಗುಣಾತಿಶಯಗಳು ವಿವರಿಸುತ್ತದೆ.

## 1.4. ಕ್ರಿಸ್ತನಲ್ಲಿ ಇರುವುದರಿಂದ ಉಂಟಾಗುವ ಪರಿಣಾಮಗಳು

### 1.4.1. ಒಂದು ನೂತನವಾದ ವ್ಯಕ್ತಿತ್ವ

2 ಕೊರಿಂಥದವರಿಗೆ 5:17

**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿಯಲ್ಲಾ ಹೋಗಿ ಎಲ್ಲಾ ನೂತನವಾಯಿತು.**

(ಅ) ನಾವು ಹಿಂದೆ ಪಾಪಿಗಳಾಗಿದ್ದೆವು, ಆದರೆ ಈಗ ಕ್ರಿಸ್ತನಲ್ಲಿ ನಾವು ವಿಶ್ವಾಸಿಗಳಾಗಿದ್ದೇವೆ.

(ಆ) ನಾವು ಹಿಂದೆ ಅಪರಾಧಿಗಳಾಗಿದ್ದೆವು, ಆದರೆ ಈಗ ಕ್ರಿಸ್ತನಲ್ಲಿ ನಾವು ನೀತಿವಂತರೆಂದು ಎಣಿಸಲ್ಪಟ್ಟಿದ್ದೇವೆ.

(ಇ) ನಾವು ಹಿಂದೆ ಅನೀತಿವಂತರಾಗಿದ್ದೆವು, ಆದರೆ ಈಗ ಕ್ರಿಸ್ತನಲ್ಲಿ ನಾವು ದೇವರ ನೀತಿಯಾಗಿದ್ದೇವೆ.

(ಈ) ನಮ್ಮ ಆತ್ಮಿಕ ಸ್ಥಿತಿಯು ಹಿಂದೆ ಎಂದು ಇಲ್ಲದ ಹಾಗೆ ಇರುತ್ತದೆ.

ಮತ್ತು ಇನ್ನೂ ಬಹಳಷ್ಟು... (ಇವುಗಳ ವಿಷಯವಾಗಿ ಇನ್ನೂ ವಿವರವಾಗಿ ಈ ಪುಸ್ತಕದ ಮುಂಬರುವ ಪಾಠಗಳಲ್ಲಿ ಕಲಿತುಕೊಳ್ಳೋಣ)

ಇದರ ಅರ್ಥವೇನೆಂದರೆ ನಮ್ಮ ಸ್ವಪ್ರತಿಷ್ಠೆಯನ್ನು ಬದಲಾಯಿಸಿಕೊಳ್ಳುವ ಅಗತ್ಯವಿದೆ. ನಾವು ನಮ್ಮ ಬಗ್ಗೆ ಯೋಚಿಸುವ ಮತ್ತು ಮಾತನಾಡುವ ರೀತಿಯನ್ನು ಬದಲಾಯಿಸಿಕೊಳ್ಳ ಬೇಕು. ನಾವು ನಮ್ಮ ಬಗ್ಗೆ ನೋಡುವುದರ ವಿಷಯವಾಗಿ ಹೇಗೆ ರೂಢಿಸಿಕೊಂಡಿದ್ದೇವೊ, ಅಥವಾ ಇತರರು ನಮ್ಮ ವಿಷಯವಾಗಿ ಏನನ್ನು ದೃಷ್ಟಿಸುತ್ತಾರೊ ಎಂಬುದರ ಬದಲಾಗಿ ಕ್ರಿಸ್ತನಲ್ಲಿ ದೇವರು ನಮ್ಮನ್ನು ಹೇಗೆ ವೀಕ್ಷಿಸುತ್ತಾನೆ ಎಂಬುದರ ಬಗ್ಗೆ ಯೋಚಿಸುವ ಮತ್ತು ಮಾತನಾಡುವ ಅಗತ್ಯವಿದೆ.

## 1.5. ಈ ಸತ್ಯವುಳ್ಳ ಸಂಗತಿಯು ನಿಮ್ಮನ್ನು ಹೇಗೆ ಬದಲಾಯಿಸಲು ಸಾಧ್ಯ?

### 1.5.1. ಇದು ನಿಮ್ಮ ಸ್ವಪ್ರತಿಷ್ಠೆಯನ್ನು ಬದಲಾಯಿಸುತ್ತದೆ

ನೀವು ಕ್ರಿಸ್ತನಲ್ಲಿ ಏನಾಗಿದ್ದಿರೋ ನಿಜಸ್ಥಿತಿಯಲ್ಲಿ ನೀವು ಹಾಗೆ ಇರುವಿರಿ. ನಿಮ್ಮ ಸ್ವಪ್ರತಿಷ್ಠೆಯನ್ನು ನಿಮ್ಮ ಯೋಗ್ಯತೆಯ ಮೇಲೆ ಮತ್ತು ನಿಮ್ಮ ಸಾಧನೆಗಳ ಮೇಲೆ ಇಡದೆ ಮತ್ತು ಇತರರು ನಿಮ್ಮ ಬಗ್ಗೆ ಏನು ಹೇಳುತ್ತಾರೋ ಎಂಬುದರ ಮೇಲೆ ಇಡದೆ ವಾಸ್ತವಿಕವಾಗಿ ನೀವು ಕ್ರಿಸ್ತನಲ್ಲಿ ಯಾರು ಎಂಬ ಸತ್ಯಾಂಶದ ಮೇಲೆ ಇಡುವುದನ್ನು ಕಲಿತುಕೊಳ್ಳಬೇಕು.

### 1.5.2. ನೀವು ದೇವರಿಗೆ ಯಾವ ರೀತಿ ಸಂಬಂಧಿಸುತ್ತೀರಾ ಎಂಬ ರೀತಿಯನ್ನು ಇದು ಬದಲಾಯಿಸುತ್ತದೆ

ದೇವರೊಂದಿಗೆ ಇರುವ ನಿಮ್ಮ ಅನುದಿನದ ಅನ್ಯೋನ್ಯತೆ, ದೇವರ ಪ್ರಸನ್ನತೆಗೆ ಪ್ರವೇಶಿಸುವ ಅರ್ಹತೆ ಮತ್ತು ದೇವರೊಂದಿಗೆ ನಿಮ್ಮ ಬಾಂಧವ್ಯವು ನಿಮ್ಮ ಕಾರ್ಯಗಳ ಮೇಲೆ ಆಧಾರಗೊಂಡಿಲ್ಲ. ನಾವು ಕ್ರಿಸ್ತನಲ್ಲಿ ಯಾರು ಎಂಬುದರ ಮೇಲೆ ಇದು ಆಧಾರಗೊಂಡಿದೆ.

### 1.5.3. ನಿಮ್ಮ ಜೀವಿತದಲ್ಲಿ ಎದುರುಗೊಳ್ಳುವ ಕಷ್ಟಗಳನ್ನು ಮತ್ತು ಸವಾಲುಗಳನ್ನು ನೋಡುವ ರೀತಿಯನ್ನು ಇದು ಬದಲಾಯಿಸುತ್ತದೆ

ಕ್ರಿಸ್ತನು ನಿನ್ನಲ್ಲಿ ಮತ್ತು ನೀನು ಕ್ರಿಸ್ತನಲ್ಲಿ ಇರುವಾಗ ನೀನು ಜಯಶಾಲಿಯಾಗುತ್ತೀಯಾ. ದೇವರು ಮತ್ತು ನೀನು ಜೊತೆಯಲ್ಲಿರುವಾಗ ಪ್ರಧಾನವಾದ ಬಹುಮತದಲ್ಲಿರುವಿರಿ.

### 1.5.4. ಇದು ನಿಮ್ಮ ಜೀವಿತದ ಶೈಲಿಯನ್ನು ಬದಲಾಯಿಸುತ್ತದೆ

ನಿಮ್ಮ ಜೀವಿತದಲ್ಲಿ ಪಾಪವನ್ನು ಜಯಿಸಲು ಇದು ಸಹಾಯ ಮಾಡುತ್ತದೆ. "ಪಾಪವು ನಿಮ್ಮ ಮೇಲೆ ಅಧಿಕಾರನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ." (ರೋಮಾಪುರದವರಿಗೆ 6:14). ಪಾಪವು ಎಂದಿಗೂ ನಿಮ್ಮ ಮೇಲೆ ದೊರೆತನ ಮಾಡದು. ನೀವು ಪಾಪದ ಬಂಧನದಲ್ಲಿ ಇರುವುದು ಅಗತ್ಯವಿಲ್ಲ.

### 1.5.5. ದುರಾತ್ಮಗಳನ್ನು ಮತ್ತು ದುರಾತ್ಮ ಶಕ್ತಿಗಳನ್ನು ನೀವು ಹೇಗೆ ಎದುರುಗೊಳ್ಳುತ್ತಿರಿ ಎಂಬ ರೀತಿಯನ್ನು ಇದು ಬದಲಾಯಿಸುತ್ತದೆ.

ನೀವು ಕ್ರಿಸ್ತನಲ್ಲಿ ಯಾರು ಎಂಬ ಸತ್ಯಾಂಶವನ್ನು ತಿಳಿದುಕೊಂಡಾಗ ದುರಾತ್ಮವನ್ನು ಮತ್ತು ದುಷ್ಟ ಶಕ್ತಿಗಳನ್ನು ಎದುರಿಸಲು ಇದು ನಿಮಗೆ ಧೈರ್ಯವನ್ನು ಕೊಡುತ್ತದೆ.

### 1.5.6. ನೀವು ಜನರೊಂದಿಗೆ ಹೇಗೆ ಸಂಬಂಧ ಹೊಂದುತ್ತೀರ ಎಂಬ ರೀತಿಯನ್ನು ಕೂಡ ಇದು ಬದಲಾಯಿಸುತ್ತದೆ

ಬೇರೆ ವ್ಯಕ್ತಿಯನ್ನು ನೋಡುವಾಗ ಆ ವ್ಯಕ್ತಿಯು ಸ್ವಾಭಾವಿಕ ದೃಷ್ಠಿಯಲ್ಲಿ ಮಹತ್ತರವಾಗಿ ಕಂಡುಬರದೆ ಇದ್ದರೂ, ಆ ವ್ಯಕ್ತಿಯು ಕ್ರಿಸ್ತನಲ್ಲಿದ್ದರೆ ಒಬ್ಬ ಸಹೋದರನಾಗಿದ್ದಾನೆ. ಆ ವ್ಯಕ್ತಿಯ ವಿದ್ಯಾಭ್ಯಾಸವನ್ನಾಗಲಿ ಅಥವಾ ಅರ್ಹತೆಯನ್ನು ನೋಡಿ ಸಂಬಂಧಿಸುವುದಿಲ್ಲ. ಆತನು ಕ್ರಿಸ್ತನಲ್ಲಿ ಒಬ್ಬ ಸಹೋದರನಾಗಿದ್ದಾನೆ. ಈ ರೀತಿಯಲ್ಲಿ ಉಪಚರಿಸುವಂತದ್ದು ಒಳ್ಳೇದು. ಒಂದು ವೇಳೆ ಆ ಸಹೋದರನಿಗೆ ಬಲವಾದ ಮತ್ತು ಕ್ರಿಯಾತ್ಮಕವಾದ ಸೇವೆ ಇದ್ದರೆ, ದೇವರು ಆತನನ್ನು ಆಶೀರ್ವದಿಸಲಿ ಮತ್ತು ಆತನು ಕ್ರಿಸ್ತನಲ್ಲಿ ನಿಮ್ಮ ಸಹೋದರನಾಗಿದ್ದಾನೆ. ನೀವು ಪೈಪೋಟಿಯಲ್ಲಿಲ್ಲ. ನೀವು ಸಹಯೋಗದಲ್ಲಿದ್ದೀರಿ ಮತ್ತು ಜೊತೆಗೂಡಿ ಕೆಲಸಮಾಡುವವರಾಗಿರುತ್ತೀರಿ. ನೀವು ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದೀರಿ. ನೀವು ಅಭದ್ರವಾಗಿದ್ದೀರೆಂದು ಅಂದುಕೊಳ್ಳಬೇಕಿಲ್ಲ. ನಾವೆಲ್ಲರೂ ಕರ್ತನಿಗೆ ಸೇರಿದವರಾಗಿದ್ದೇವೆ.

# ಅಧ್ಯಾಯ 2

# ನೂತನವಾದ ಸೃಷ್ಠಿ

2 ಕೊರಿಂಥದವರಿಗೆ 5:17

**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿಯಲ್ಲಾ ಹೋಗಿ ಎಲ್ಲಾ ನೂತನವಾಯಿತು.**

1 ಕೊರಿಂಥದವರಿಗೆ 6:17

**ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಅತ್ಮವಾಗಿದ್ದಾನೆ.**

ಯೇಸುವಿನಲ್ಲಿ ನಂಬಿಕೆಯಿಡುವ ಪ್ರತಿ ವ್ಯಕ್ತಿಯು ಕ್ರಿಸ್ತನಲ್ಲಿ ಇದ್ದಾನೆ ಎಂದು ಸತ್ಯವೇದವು ಪ್ರಕಟಿಸುತ್ತದೆ. ಕ್ರಿಸ್ತನಲ್ಲಿರುವುದು ಅಂದರೆ ಆತ್ಮಿಕವಾಗಿ ಆತನಲ್ಲಿ ಒಂದಾಗಿರುವುದು.

ಯಾವನಾದರು ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಠಿಯಾಗುವನು (2 ಕೊರಿಂಥದವರಿಗೆ 5:17). ಹಾಗಾದರೆ ನೂತನ ಸೃಷ್ಠಿ ಅಂದರೇನು?

## 2.1. ನಾವು ಹಿಂದೆ ಏನು ಹಾಗಿರರಲಿಲ್ಲವೋ ಈಗ ಹಾಗಿದ್ದೇವೆ

ಎಫೆಸದವರಿಗೆ 2:10

**ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು.**

ದೈವಿಕವಾದ ದೇವರ ಸೃಷ್ಠಿಯ ಕಾರ್ಯವು ನಮ್ಮನ್ನು ಕ್ರಿಸ್ತನಲ್ಲಿ ಇರಿಸಿದೆ. ಬೇರೆ ಪದಗಳಲ್ಲಿ ವಿವರಿಸುವುದಾದರೆ ದೇವರು ತನ್ನ ಸೃಷ್ಠಿಯ ಶಕ್ತಿಯನ್ನು ನಮ್ಮಲ್ಲಿ ವಿತರಿಸಿ ನಮ್ಮನ್ನು ಕ್ರಿಸ್ತನಲ್ಲಿ ನೂತನ ಸೃಷ್ಠಿಗಳನ್ನಾಗಿ ಮಾಡಿದ್ದಾನೆ.

ನಾವು ನೂತನ ಸೃಷ್ಠಿಗಳಾಗಿದ್ದೇವೆ. ನಾವು ಹಿಂದೆ ಏನು ಹಾಗಿರಲಿಲ್ಲವೋ ಈಗ ಹಾಗಿದ್ದೇವೆ. ಸೃಷ್ಠಿ ಎಂಬ ಪದದ ಅರ್ಥವೇನೆಂದರೆ ಮುಂಚೆ ಯಾವುದು ಜೀವದಿಂದಿರಲಿಲ್ಲವೋ ಅದನ್ನು ಜೀವಿತದ ಅಸ್ತಿತ್ವಕ್ಕೆ ತರುವುದು.

**ಉದಾಹರಣೆಗೆ**

ಎಫೆಸದವರಿಗೆ 2:1
**ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು.**

ಎಫೆಸದವರಿಗೆ 2:13
**ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ.**

ಎಫೆಸದವರಿಗೆ 5:8
**ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ.**

## 2.2. ನಾವು ಈಗ ನೂತನ ಸೃಷ್ಠಿಯಾಗಿರುವಂಥದ್ದು ಆತ್ಮದಲ್ಲಿ ಮಾತ್ರ– ದೇಹದಲ್ಲಿ ಮತ್ತು ಮನಸ್ಸಿನಲ್ಲಿ ಅಲ್ಲ.

1 ಥೆಸಲೋನಿಕದವರಿಗೆ 5:23
**ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಿಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣ ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ.**

ಈ ವಾಕ್ಯವು ಪ್ರಕಟಿಸುವುದೇನೆಂದರೆ ಪ್ರತಿ ಮಾನವನು ಶರೀರ, ಆತ್ಮ ಮತ್ತು ಪ್ರಾಣವನ್ನು ಹೊಂದಿದ ಜೀವಿಯಾಗಿದ್ದಾನೆ. ನಾವು ಆತ್ಮವುಳ್ಳವರು, ನಮಗೆ ಪ್ರಾಣವಿದೆ ಮತ್ತು ನಾವು ದೇಹದಲ್ಲಿ ಜೀವಿಸುತ್ತಾ ಇದ್ದೇವೆ. ನಮ್ಮ ಪ್ರಾಣವು ಒಳಗೊಂಡಿರುವುದೇನೆಂದರೆ ನಮ್ಮ ಮನಸ್ಸು, ಭಾವನೆಗಳು, ಚಿತ್ತ ಮತ್ತು ಮಾನಸಿಕ ಸಾಮರ್ಥ್ಯತೆ. ನಮ್ಮ ದೇಹವು ಹೊರಪದರವಾಗಿದೆ. ಒಳಗಿರುವ ನಿಜವಾದ ವ್ಯಕ್ತಿತ್ವವು ಆತ್ಮಿಕ ಮನುಷ್ಯನಾಗಿದ್ದಾನೆ. ನಾವು ನೂತನ ಸೃಷ್ಠಿಯಾಗಿರುವಂಥದ್ದು ನಮ್ಮ ಆತ್ಮದಲ್ಲಿ.

ಎಫೆಸದವರಿಗೆ 4:17–25
**ಆದದರಿಂದ ಅನ್ಯಜನರು ನಡೆದುಕೊಳ್ಳುವ ಪ್ರಕಾರ ನೀವು ಇನ್ನು ಮೇಲೆ ನಡೆದುಕೊಳ್ಳಬಾರದೆಂದು ಕರ್ತನಲ್ಲಿರುವವನಾಗಿ ನಿಮಗೆ ಖಂಡಿವಾಗಿ ಹೇಳುತ್ತೇನೆ. ಅವರು ನಿಷ್ಪ್ರಯೋಜನವಾದ ಬುದ್ಧಿಯುಳ್ಳವರಾಗಿ ನಡೆದುಕೊಳುತ್ತಾರೆ; ಅವರ ಮನಸ್ಸು ಮೊಬ್ಬಾಗಿ ಹೋಗಿದೆ, ಅವರು ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ. ಅವರು ತಮ್ಮ ದುಃಸ್ಥಿತಿಗಾಗಿ ಸ್ವಲ್ಪವೂ ಚಿಂತಿಸದೆ**

**ತಮ್ಮನ್ನು ಬಂಡುತನಕ್ಕೆ ಒಪ್ಪಿಸಿ ಕೊಟ್ಟು ಎಲ್ಲಾ ವಿಧವಾದ ಅಶುದ್ಧ ಕೃತ್ಯಗಳನ್ನು ಅತ್ಯಾಶೆಯಿಂದ ನಡಿಸುವವರಾಗಿದ್ದಾರೆ. ನೀವಾದರೋ ಕ್ರಿಸ್ತನ ಧರ್ಮವನ್ನು ಅಂಥದೆಂದು ಕಲಿತುಕೊಳ್ಳಲಿಲ್ಲ. ಆತನನ್ನೇ ಕೇಳಿದಿರಲ್ಲಾ, ಆತನಲ್ಲಿಯೇ ಉಪದೇಶವನ್ನು ಹೊಂದಿದಿರಲ್ಲಾ. ಯೇಸುವಿನಲ್ಲಿರುವ ಸತ್ಯೋಪದೇಶವು ಯಾವದಂದರೆ– ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವಸ್ವಭಾವವನ್ನು ತೆಗೆದುಹಾಕಿಬಿಡಬೇಕು; ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟುಹೋಗುವಂಥದು. ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ. ಆದಕಾರಣ ಸುಳ್ಳಾಡುವದನ್ನು ಬಿಟ್ಟು ಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ; ಯಾಕೆಂದರೆ ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವಲ್ಲಾ.**

ನಾವು ಕ್ರಿಸ್ತನಲ್ಲಿ ನೂತನ ಸೃಷ್ಠಿಯಾಗಿದ್ದೇವೆ ಆದರೆ ನಮ್ಮ ಮನಸ್ಸು ಇನ್ನೂ ನವೀಕೃತಗೊಂಡಿಲ್ಲ. ನಮ್ಮ ಮನಸ್ಸು ದೇವರ ವಾಕ್ಯದ ಮೂಲಕ ನೂತನಗೊಂಡು ಒಂದು ಬದಲಾವಣೆಯ ಅಂತಕ್ಕೆ ಸಾಗಬೇಕಾಗಿದೆ. ಮತ್ತು ನಮ್ಮ ದೇಹವನ್ನು ಹತೋಟಿಯಲ್ಲಿ ಇಡಬೇಕಾಗಿದೆ. ನಾವು ನಮ್ಮ ಆತ್ಮದಲ್ಲಿ ನೂತನ ಸೃಷ್ಠಿಗಳಾಗಿದ್ದೇವೆ. ಆದರೆ ನಮ್ಮ ಮನಸ್ಸು ಮತ್ತು ದೇಹವನ್ನು ನಮ್ಮ ಆತ್ಮದ ಅಧೀನತೆಯಲ್ಲಿ ಇಡಬೇಕು.

## 2.3. ನಾವು ನೂತನ ಸೃಷ್ಠಿಯಾಗಿರುವಂತದ್ದು ದೇವರ ಸ್ವಾರೂಪ್ಯದಲ್ಲಿ

ಎಫೆಸದವರಿಗೆ 4:23, 24

**ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ.**

ದೇವರು, ಮನುಷ್ಯನನ್ನು ತನ್ನ ಸ್ವಾರೂಪ್ಯದಲ್ಲಿ ಉಂಟುಮಾಡಿದನು ಎಂದು ದೇವರ ವಾಕ್ಯ ಹೇಳುತ್ತದೆ (ಆದಿಕಾಂಡ 1:27). ದೇವರು ತನ್ನ ಜೀವಶ್ವಾಸವನ್ನು ಅವನಲ್ಲಿ ಊದಿದನು. ದೇವರು ತನ್ನದೇ ಆದಂತದನ್ನು ಮನುಷ್ಯನೊಳಗೆ ಇಟ್ಟಿದ್ದಾನೆ. ಆತನ ಸ್ವರೂಪ್ಯದಲ್ಲಿರುವ ಒಂದು ಜನಾಂಗವಿರಬೇಕೆಂಬುದೆ ದೇವರ ಯೋಜನೆಯಾಗಿತ್ತು. ಆದರೆ ಪಾಪದ ಕಾರಣ ಈ ಸ್ವಾರೂಪ್ಯವು ಕೆಟ್ಟುಹೋಯಿತು. ಹೇಗಿದ್ದರೂ, ಈಗ ನಾವು ಕ್ರಿಸ್ತನಲ್ಲಿರುವ ಕಾರಣ, ನಮ್ಮ ಆಂತರ್ಯವು ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲ್ಪಟ್ಟಿದೆ. ನಾವು ಕ್ರಿಸ್ತನಲ್ಲಿ ಜೋಡಣೆಯಾದಾಗ ದೇವರ ಮೂಲಭೂತವಾದ ಉದ್ದೇಶವು ನಮ್ಮಲ್ಲಿ ನೆರವೇರಿತು ಮತ್ತು ಪುನಃಸ್ಥಾಪಿಸಲ್ಪಟ್ಟಿತು. ನಮ್ಮ ಆತ್ಮವು ಒಬ್ಬ ನೂತನ ಮನುಷ್ಯವಾಯಿತು.

### 2.3.1. ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟ ನಮ್ಮ "ಆತ್ಮದ ಮನುಷ್ಯನ" ಪರಿಣಾಮಗಳು

(ಅ) ನಾವು ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲ್ಪಟ್ಟಿರುವ ಕಾರಣ ಅಂದರೆ ಆತ್ಮದಲ್ಲಿ ನೂತನ ಮನುಷ್ಯರಾಗಿರುವ ಕಾರಣ, ಈಗ ನಮ್ಮಲ್ಲಿ ಜೀವವು ಮತ್ತು ದೇವರ ಸ್ವಭಾವವು ಉಂಟು. ದೇವರ ಗುಣಲಕ್ಷಣ ಮತ್ತು ಜೀವವು ನಮ್ಮಲ್ಲಿದೆ.

2 ಪೇತ್ರನು 1:3,4

**ನಮ್ಮನ್ನು ತನ್ನ ಪ್ರಭಾವದಿಂದಲೂ ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವು ದೊರೆಯಿತೆಂದು ಬಲ್ಲೆವಷ್ಟೆ. ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ.**

1 ಯೋಹಾನ 5:1

**ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಅವನು ತಂದೆಯಿಂದ ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ.**

(ಆ) ಎಫೆಸದವರಿಗೆ. 4:24 ರಲ್ಲಿ ಆಂತರ್ಯ ಮನುಷ್ಯನ ನೂತನ ಸ್ವಭಾವಗಳು ಎಂಬುದನ್ನು ನೋಡುವಾಗ ಅವು ಸತ್ಯಾನುಗುಣವಾದ ಪರಿಶುದ್ಧತೆಯಲ್ಲಿ ಮತ್ತು ನೀತಿಯಲ್ಲಿ ಒಳಗೊಂಡಿದೆ. ಇದರ ಅರ್ಥವೇನೆಂದರೆ ಈಗ ನಮಗೆ ನೀತಿಯಲ್ಲಿಯೂ ಮತ್ತು ಪರಿಶುದ್ಧತೆಯಲ್ಲಿಯೂ ನಡೆಯಲು ಶಕ್ತಿವುಂಟು.

## 2.4. ನಮ್ಮೊಳಗಿರುವ ಈ ನೂತನ ಮನುಷ್ಯನು ಜ್ಞಾನದಲ್ಲಿ ನೂತನವಾಗಬೇಕು

ಕೊಲೊಸ್ಸೆಯವರಿಗೆ 3:9,10

**ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನ ಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ.**

ನಮ್ಮೊಳಗಿರುವ ಈ ನೂತನ ಮನುಷ್ಯನು ಪ್ರತಿದಿನೇ ಜ್ಞಾನದಲ್ಲಿ ನೂತನಗೊಳ್ಳುತ್ತಾ ಮತ್ತು ಸೃಷ್ಠಿಕರ್ತನ ಜ್ಞಾನದಲ್ಲಿ ಹೆಚ್ಚಾಗಿ ಬೆಳೆಯುತ್ತಾ ಹೋಗುವನು. ನೂತನ ಸೃಷ್ಠಿಯಾಗಿರುವ ನಮ್ಮ ಆತ್ಮವು ಎಡೆಬಿಡದೆ ಸೃಷ್ಠಿಕರ್ತನ ಜ್ಞಾನದಲ್ಲಿ ವೃದ್ಧಿಯಾಗುವಂತದ್ದು ಅತ್ಯಗತ್ಯವಾಗಿದೆ.

2 ಪೇತ್ರನು 3:18

**ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರ್ರಿ. ಆತನಿಗೆ ಈಗಲೂ ಸದಾಕಾಲವೂ ಸ್ತೋತ್ರ. ಆಮೆನ್.**

ಎಫೆಸದವರಿಗೆ 4:13

**ನಾವೆಲ್ಲರೂ ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವರಾಗಿದ್ದೇವೆ.**

## 2.5. ಹಳೆಯ ಸಂಗತಿಗಳು ಹೊರಟು ಹೋಗಿವೆ

2 ಕೊರಿಂಥದವರಿಗೆ 5:17

**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿಯಲ್ಲಾ ಹೋಗಿ ಎಲ್ಲಾ ನೂತನವಾಯಿತು.**

ರೋಮಾಪುರದವರಿಗೆ 6.6

**ಪಾಪಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ.**

ಹಳೆಯ ಮನುಷ್ಯನು ಅಂದರೆ ನಮ್ಮ ಪಾಪ ಸ್ವಭಾವ ಅಥವಾ ನಮ್ಮೊಳಗೆ ಜೀವಿಸುವ ಪಾಪವಾಗಿದೆ. ಈ ಪೂರ್ವ ಪಾಪ ಸ್ವಭಾವವು ಶಿಲುಬೆಗೆ ಹಾಕಲ್ಪಟ್ಟಿರುವುದರಿಂದ ನಾವು ಇನ್ನೇಂದಿಗೂ ಪಾಪಕ್ಕೆ ದಾಸರಲ್ಲ. ನಾವು ಪಾಪಕ್ಕೆ ಒಳಪಟ್ಟವರಾಗಿ ಇರುವುದು ಅವಶ್ಯವಿಲ್ಲ.

### ಅನ್ವಯ

ನಿಮ್ಮ ಹಳೆಯ ಜೀವಿತವನ್ನು ನೋಡಿ ನಿಮ್ಮನ್ನು ನೀವು ಸೀಮಿತ ಮಾಡಿಕೊಳ್ಳಬೇಡಿ. ಯಾಕೆಂದರೆ ನಿಮ್ಮ ಆಂತರ್ಯದಲ್ಲಿ ನೀವು ಹಿಂದೆ ಎಂದೂ ಹಾಗಿರದ ಹಾಗೆ ಸೃಷ್ಟಿಸಲ್ಪಟ್ಟಿದ್ದೀರಿ. ನಿಮ್ಮೊಳಗಡೆ ಸಾಮರ್ಥ್ಯವಿದೆ. ದೇವರ ಶಕ್ತಿ ಮತ್ತು ದೇವರ ಜೀವ ನಿಮ್ಮ ಆತ್ಮದಲ್ಲಿ ಇದೆ. ನಿಮ್ಮ ಆತ್ಮದಲ್ಲಿ ದೇವರು ಇಟ್ಟಿರುವುದನ್ನು ಬಿಡುಗಡೆಗೊಳಿಸಿ ನಿಮ್ಮ ಮನಸ್ಸು ಮತ್ತು ದೇಹದ ಮೇಲೆ ಅಳ್ವಿಕೆ ನಡೆಸಲು ಅನುವು ಮಾಡಿಕೊಡುವುದಾದರೆ ಒಳಗಿರುವು ನಿಮ್ಮ ಹೊಸ ಆಂತರ್ಯ ಮನುಷ್ಯನು ನಿಮ್ಮ ದೈನಂದಿನ ಜೀವಿತದಲ್ಲಿ ತೋರಿಸಿಕೊಳ್ಳುವನು.

# ಅಧ್ಯಾಯ 3

# ನೀತಿವಂತರೆಂಬ ನಿರ್ಣಯವನ್ನು ಹೊಂದಿದ್ದೇವೆ

1 ಕೊರಿಂಥದವರಿಗೆ 6:9–11

**ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ? ಮೋಸಹೋಗಬೇಡಿರಿ. ಜಾರರು, ವಿಗ್ರಹಾರಾಧಕರು, ವ್ಯಭಿಚಾರಿಗಳು, ವಿಟರು, ಪುರುಷಗಾಮಿಗಳು, ಕಳ್ಳರು, ಲೋಭಿಗಳು ಕುಡಿಕರು, ಬೈಯುವವರು, ಸುಲುಕೊಳ್ಳುವವರು, ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ. ನಿಮ್ಮಲ್ಲಿ ಕೆಲವರು ಅಂಥವರಾಗಿದ್ದಿರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ.**

ನಾವು ತೊಳೆಯಲ್ಪಟ್ಟಿದ್ದೇವೆ, ಪ್ರತ್ಯೇಕಿಸಲ್ಪಟ್ಟಿದ್ದೇವೆ ಮತ್ತು ನೀತಿವಂತರೆಂಬ ನಿರ್ಣಯ ಹೊಂದಿದ್ದೇವೆ!

| | | |
|---|---|---|
| ತೊಳೆಯಲ್ಪಟ್ಟಿದ್ದೇವೆ | = | ಶುಚಿಯಾಗಿದ್ದೇವೆ. |
| ಪ್ರತ್ಯೇಕಿಸಲ್ಪಟ್ಟಿದ್ದೇವೆ | = | ದೇವರಿಗಾಗಿ ಮತ್ತು ಅತನ ಉದ್ದೇಶಗಳಿಗಾಗಿ ಬೇರ್ಪಟ್ಟಿದ್ದೇವೆ. |
| ನೀತಿವಂತರೆಂಬ ನಿರ್ಣಯ ಹೊಂದಿದ್ದೇವೆ | = | ತಪ್ಪಿಲ್ಲವೆಂದು ತೀರ್ಪು ಹೊಂದಿದ್ದೇವೆ, ನಿರಪರಾಧಿಯೆಂದು ಪ್ರಕಟಪಡಿಸಲಾಗಿದೆ, ಪರಿಪೂರ್ಣವಾಗಿ ಕ್ಷಮಾಪಣೆ ಹೊಂದಿದ್ದೇವೆ, ನಿಷ್ಕಳಂಕರಾಗಿಯೂ ಮತ್ತು ನಿರ್ದೋಷಿಗಳಾಗಿದ್ದೇವೆ, ಪಾಪವನ್ನು ಮಾಡಿಲ್ಲದವರಂತೆ ನಿರ್ಣಯಿಸಲ್ಪಟ್ಟಿದ್ದೇವೆ. |

## 3.1. ಆತನ ಕೃಪೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ

ರೋಮಾಪುರದವರಿಗೆ 3:22–26

**ದೇವರಿಂದಾಗುವ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವದು. ಹೆಚ್ಚು ಕಡಿಮೆ ಏನೂ ಇಲ್ಲ. ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ**

**ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ.**

- ದೇವರ ನೀತಿ– ದೇವರು ತನ್ನದೇ ನೀತಿಯನ್ನು ನಂಬುವ ಎಲ್ಲರ ಮೇಲೆಯೂ ಮತ್ತು ನಂಬಿರುವ ಎಲ್ಲರಿಗೂ ಕೊಟ್ಟಿದ್ದಾನೆ.
- ಕ್ರಿಸ್ತಯೇಸುವಿನಲ್ಲಿರುವ ವಿಮೋಚನೆಯ ಕಾರಣ ನಾವು ದೇವರ ಕೃಪೆಯಿಂದ ಉಚಿತವಾಗಿ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ.

ತೀತನಿಗೆ 3:4–7
**ನಮ್ಮ ರಕ್ಷಕನಾದ ದೇವರ ದಯೆಯೂ ಜನೋಪಕಾರವೂ ಪ್ರತ್ಯಕ್ಷವಾಗಿರುವ ಕಾರಣ ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟು ಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು. ನಾವು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಕೃಪೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟು ನಿತ್ಯಜೀವದ ನಿರೀಕ್ಷೆಯನ್ನು ಪಡೆದು ಅದಕ್ಕೆ ಬಾಧ್ಯರಾಗುವಂತೆ ದೇವರು ಆತನ ಮೂಲಕ ಪವಿತ್ರಾತ್ಮನನ್ನು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿದನು. ಇದು ನಂಬತಕ್ಕ ಮಾತಾಗಿದೆ.**

## 3.2. ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ

ರೋಮಾಪುರದವರಿಗೆ 5:1,2
**ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೋಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ. ನಾವು ಈಗ ನೆಲೆಗೊಂಡಿರುವ ದೇವರ ಕೃಪಾಶ್ರಯದಲ್ಲಿ ಆತನ ಮುಖಾಂತರವೇ ನಂಬಿಕೆಯಿಂದ ಪ್ರವೇಶವಾಯಿತು. ಮತ್ತು ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ.**

ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುವ ಕಾರಣ ಈಗ ನಮಗೆ ದೇವರೊಂದಿಗೆ ಸಮಾಧಾನ ಉಂಟು.

ರೋಮಾಪುರದವರಿಗೆ 5:9
**ಈಗ ನಾವು ಅತನ ರಕ್ತದಿಂದ ನೀತಿವಂತರಾಗಿರಲಾಗಿ ಅತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತೂ ನಿಶ್ಚಯವಲ್ಲವೇ.**

ರೋಮಾಪುರದವರಿಗೆ 3:25
**ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು.**

ಗ್ರೀಕ್ ಭಾಷೆಯಲ್ಲಿ "ಕೃಪಾಧಾರ" ಅಂದರೆ ಕೃಪೆಯ ಆಸನವಾಗಿದೆ.

ಕ್ರಿಸ್ತನು ನಮಗೊಸ್ಕರ "ಕೃಪಾಸನ"ವಾದನು. ಆತನ ಮೂಲಕವಾಗಿ ನಾವು ದೇವರೊಟ್ಟಿಗೆ ಸಂಧಾನ ಹೊಂದಿದ್ದೇವೆ.

ವಿಮೋಚನಕಾಂಡ 25:21,22
**ಆ ಕೃಪಾಸನವನ್ನು ಮಂಜೂಷದ ಮೇಲಿಡಬೇಕು. ನಾನು ನಿನಗೆ ಕೊಡುವ ಆಜ್ಞಾಶಾಸನಗಳನ್ನು ಆ ಮಂಜೂಷದೊಳಗೆ ಇಡಬೇಕು. ಅಲ್ಲಿಯೇ ನಾನು ನಿನಗೆ ದರ್ಶನವನ್ನು ಕೊಡುವೆನು; ಕೃಪಾಸನದ ಮೇಲೆ ಆಜ್ಞಾಶಾಸನಗಳನ್ನು ಇಟ್ಟಿರುವ ಮಂಜೂಷದ ಮೇಲಣ ಎರಡು ಕೆರೂಬಿಗಳ ನಡುವೆಯೇ ನಾನು ಇದ್ದು ನಿನ್ನ ಸಂಗಡ ಮಾತಾಡಿ ನೀನು ಇಸ್ರಾಯೇಲ್ಯರಿಗೆ ಅಜ್ಞಾಪಿಸಬೇಕಾಗಿರುವ ಎಲ್ಲಾ ಸಂಗತಿಗಳನ್ನು ತಿಳಿಸುವೆನು.**

ಯಾಜಕಕಾಂಡ 16:14, 15
**ಆಗ ಆ ಹೋರಿಯ ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು ಕೃಪಾಸನದ ಪೂರ್ವಭಾಗದ ಮೇಲೆ ಬೆರಳಿನಿಂದ ಚಿಮಿಕಿಸಿ ಕೃಪಾಸನದ ಎದುರಾಗಿಯೂ ಏಳು ಸಾರಿ ಚಿಮಿಕಿಸಬೇಕು. ತರುವಾಯ ಅವನು ಜನರಿಗೋಸ್ಕರವಾದ ದೋಷಪರಿಹಾರಕ ಯಜ್ಞದ ಹೋತವನ್ನು ವಧಿಸಿ ಅದರ ರಕ್ತವನ್ನು ತೆರೆಯೊಳಗೆ ತಂದು ಹೋರಿಯ ರಕ್ತದಿಂದ ಮಾಡಿದಂತೆಯೇ ಇದರ ರಕ್ತದಿಂದಲೂ ಮಾಡಿ ಕೃಪಾಸನದ ಮೇಲೆಯೂ ಎದುರಾಗಿಯೂ ಚಿಮಿಕಿಸಬೇಕು.**

ಕೊಲೊಸ್ಸೆಯವರಿಗೆ 1:20,22
**ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆಮಾಡಿದನು. ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ; ಮತ್ತು ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ.**

## 3.3. ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ

ರೋಮಾಪುರದವರಿಗೆ 3:22
**ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು.**

2 ಕೊರಿಂಥದವರಿಗೆ 5:21

**ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು.**

1 ಕೊರಿಂಥದವರಿಗೆ 1:30

**ನೀವು ಕ್ರಿಸ್ತ ಯೇಸುವಿನಲ್ಲಿರುವ ಆತನಿಂದಲೇ; ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ಮತ್ತು ವಿಮೋಚನೆಗಳಿಗೆ ಕಾರಣನೂ ಆದನು.**

ಫಿಲಿಪ್ಪಿಯವರಿಗೆ 3:8, 9

**ಇಷ್ಟೇ ಅಲ್ಲದೆ, ನನ್ನ ಕರ್ತನಾದ ಕ್ರಿಸ್ತ ಯೇಸುವನ್ನ ಅರಿಯುವುದೇ ಅತಿಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತ ನಾವು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ. ಇದರಲ್ಲಿ ನನ್ನ ಉದ್ದೇಶವೇನೆಂದರೆ– ನಾವು ಕ್ರಿಸ್ತನನ್ನು ಸಂಪಾದಿಸಿಕೊಂಡು ನೇಮನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನು ಆಶ್ರಯಿಸದೆ ಕ್ರಿಸ್ತನನ್ನು ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳಬೇಕೆಂಬದೇ.**

## ಅನ್ವಯ

1. ಆದಕಾರಣ ಈಗ ಅಪರಾಧ ನಿರ್ಣಯವು ಇಲ್ಲವೇ ಇಲ್ಲ

ರೋಮಾಪುರದವರಿಗೆ 8:1, 33–34

**ಆದಕಾರಣ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. ದೇವರು ಆದುಕೊಂಡವರ ಮೇಲೆ ಯಾರು ತಪ್ಪು ಹೊರಿಸಾರು? ದೇವರೇ ನಮ್ಮನ್ನು ನೀತಿಂತರೆಂದು ನಿರ್ಣಯಿಸುವವನಾಗಿದ್ದಾನೆ. ಆಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ.**

2. ದೇವರ ಪ್ರಸನ್ನತೆಗೆ ಪ್ರವೇಶಿಸಲು ಈಗ ನಿಮಗೆ ಧೈರ್ಯವುಂಟು.

ಎಫೆಸದವರಿಗೆ 2:13, 18

**ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮಿೂಪಸ್ಥರಾದಿರಿ. ಆತನ ಮೂಲಕ ನಾವು ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವುದಕ್ಕೆ ಮಾರ್ಗವಾಯಿತು.**

ಎಫೆಸದವರಿಗೆ 3:12

**ದೇವರ ಸಾನ್ನಿಧ್ಯ ಸೇರುವದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ಆತನಲ್ಲಿಯೇ ನಮಗೆ ಉಂಟಾಯಿತು.**

ಇಬ್ರಿಯರಿಗೆ 10:19
**ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು.**

3. ಹೊರಬರುವ ಶಕ್ತಿಯು ದೊರೆಯುತ್ತದೆ..

ಪ್ರಕಟಣೆ 12:11
**ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು.**

ರೋಮಾಪುರದವರಿಗೆ 5:17
**ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.**

4. ದೇವರು ಕೊಟ್ಟಿರುವ ಈ ನೀತಿಯಲ್ಲಿ ನಡೆಯುವಾಗ ಇದು ನಮ್ಮನ್ನು ಅನ್ಯೋನ್ಯತೆಯಲ್ಲಿ ಇಡುತ್ತದೆ.

1 ಯೋಹಾನನು 1:7–9
**ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ. ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ. ಮತ್ತು ಸತ್ಯವೆಂಬುದು ನಮ್ಮಲ್ಲಿ ಇಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ, ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು.**

# ಅಧ್ಯಾಯ 4

# ಪ್ರತಿಷ್ಠಿತರೂ ಮತ್ತು ಪರಿಶುದ್ಧರು

1 ಕೊರಿಂಥದವರಿಗೆ 6:9–11

**ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ? ಮೋಸಹೋಗಬೇಡಿರಿ. ಜಾರರು, ವಿಗ್ರಹಾರಾಧಕರು, ವ್ಯಭಿಚಾರಿಗಳು, ವಿಟರು, ಪುರುಷಗಾಮಿಗಳು, ಕಳ್ಳರು, ಲೋಭಿಗಳು ಕುಡಿಕರು, ಬೈಯುವವರು, ಸುಲುಕೊಳ್ಳುವವರು, ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ. ನಿಮ್ಮಲ್ಲಿ ಕೆಲವರು ಅಂಥವರಾಗಿದ್ದಿರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ.**

ಗ್ರೀಕ್ ಪದ "ಹಗಿಯಾಜೋ" ಎಂಬುದರ ಅರ್ಥ ಪವಿತ್ರೀಕರಿಸು, "ಹಗಿಯಾಸಮೊಸ್" ಅಂದರೆ ಪವಿತ್ರೀಕರಣ.

ಪ್ರತ್ಯೇಕಿಸಲ್ಪಡುವುದು ಅಂದರೆ ಬೇರ್ಪಡುವುದು, ಸಮರ್ಪಿಸುವುದು ಮತ್ತು ಪರಿಶುದ್ಧವಾದುದು, ತೊಳೆಯಲ್ಪಟ್ಟದ್ದು.

1 ಕೊರಿಂಥದವರಿಗೆ 1:2

**ಕೊರಿಂಥದಲ್ಲಿನ ದೇವರ ಸಭೆಗೆ ಅಂದರೆ ಕ್ರಿಸ್ತಯೇಸುವಿನಲ್ಲಿ ಪ್ರತಿಷ್ಠಿತರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರಿಗೆ ಮತ್ತು ನಮಗೂ ಸಮಸ್ತದೇವಜನರಿಗೂ ಕರ್ತನಾಗಿರುವ ಯೇಸು ಕ್ರಿಸ್ತನ ನಾಮಸ್ಮರಣೆಯನ್ನು ಮಾಡುವವರು ಎಲ್ಲಿದ್ದರೂ ಅವರೆಲ್ಲರೆಗೆ ಬರೆಯುವದೇನಂದರೆ.**

1 ಕೊರಿಂಥದವರಿಗೆ 1:30

**ನೀವು ಕ್ರಿಸ್ತ ಯೇಸುವಿನಲ್ಲಿರುವದು ಆತನಿಂದಲೇ; ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ಮತ್ತು ವಿಮೋಚನೆಗಳಿಗೆ ಕಾರಣನೂ ಆದನು.**

## 4.1. ನೀವು ಕ್ರಿಸ್ತನಲ್ಲಿ ಪ್ರತ್ಯೇಕಿಸಲ್ಪಟ್ಟಿದ್ದಿರಿ

1 ಪೇತ್ರನು 2:9,10

**ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ**

**ಪ್ರಜೆಯೂ ಆಗಿದ್ದೀರಿ. ಮೊದಲು ನೀವು ಪ್ರಜೆಯಾಗಿರಲಿಲ್ಲ, ಈಗ ದೇವರ ಪ್ರಜೆಯಾಗಿದ್ದೀರಿ; ಮೊದಲು ವಾತ್ಸಲ್ಯಹೊಂದಿರಲಿಲ್ಲ, ಈಗ ವಾತ್ಸಲ್ಯಹೊಂದಿದವರಾಗಿದ್ದೀರಿ.**

ಆತನ ಸ್ತುತಿಯು (ಗ್ರೀಕ್ ಭಾಷೆಯಲ್ಲಿ "ಅರೆಟಸ್" ಅಂದರೆ ಗುಣಾತಿಶಯಗಳು) ನಮ್ಮ ಮೂಲಕವಾಗಿ ಪ್ರಚಾರವಾಗಬೇಕೆಂದು ದೇವರು ಅಪೇಕ್ಷಿಸುತ್ತಾನೆ.

## 4.2. ವಿಶ್ವಾಸಿಗಳು ಶುದ್ಧೀಕರಣಗೊಂಡವರು

ಗ್ರೀಕ್ ಭಾಷೆಯಲ್ಲಿ "ಅಗಿಯಾಜೋ" ಅಂದರೆ ಅತೀ ಪ್ರತ್ಯೇಕವಾದದ್ದು ಮತ್ತು ಪ್ರತಿಷ್ಠೆಯುಳ್ಳದಾಗಿದೆ.

ಎಫೆಸದವರಿಗೆ 1:1
**ದೇವರ ಚಿತ್ತಾನುಸಾರವಾಗಿ ಕ್ರಿಸ್ತ ಯೇಸುವಿನ ಅಪೊಸ್ತಲನಾದ ಪೌಲನು ಎಫೆಸದಲ್ಲಿರುವ ದೇವಜನರಿಗೂ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಟ್ಟಿರುವವರಿಗೂ ಬರಿಯುವದೇನಂದರೆ.**

ರೋಮಾಪುರದವರಿಗೆ 1:7
**ರೋಮಾಪುರದಲ್ಲಿ ದೇವರಿಗೆ ಪ್ರಿಯರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ ಬರೆಯುವದೇನಂದರೆ.**

ಫಿಲಿಪ್ಪಿಯವರಿಗೆ 4:21
**ದೇವಜನರಲ್ಲಿ ಪ್ರತಿಯೊಬ್ಬನಿಗೆ ಜೊತೆ ಕ್ರೈಸ್ತನಿಗೆಂದು ನನ್ನ ವಂದನೆಯನ್ನು ಹೇಳಿರಿ.**

ಕೊಲೊಸ್ಸೆಯವರಿಗೆ 1:2
**ದೇವಜನರಿಗೆ ಅಂದರೆ ಕ್ರಿಸ್ತ ಯೇಸುವಿನಲ್ಲಿರುವ ನಂಬಿಗಸ್ತರಾದ ಸಹೋದರರಿಗೆ ಬರೆಯುವದೇನಂದರೆ.**

ಇಬ್ರಿಯರಿಗೆ 10:9, 10, 14
**ಇಗೋ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ ಎಂದು ಹೇಳಿದ್ದಾನೆ. ಅತನು ಎರಡನೆಯದನ್ನು ಸ್ಥಾಪಿಸುವದಕ್ಕಾಗಿ ಮೊದಲನೆಯದನ್ನು ತೆಗೆದುಬಿಡುತ್ತಾನೆ. ಯೇಸು ಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆಮಾಡಿ ದೇವರ ಚಿತ್ತವನ್ನು ನೆರವೇರಿಸಿದದರಿಂದಲೇ ನಾವು ಶುದ್ಧರಾದೆವು. ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.**

## 4.3. ಪವಿತ್ರೀಕರಣ – ಪ್ರಸ್ತುತ ನಿರಂತರ ಪ್ರಕ್ರಿಯೆ

ನಮ್ಮ ಕ್ರಿಯಾರೂಪದ ದೈನಂದಿನ ಜೀವಿತದಲ್ಲಿ ದೇವರಿಗೊಸ್ಕರ ನಮ್ಮನ್ನು ಪ್ರತ್ಯೇಕಿಸಿ ಮುಂದೆ ಸಾಗುತ್ತೇವೆ.

1 ಥೆಸಲೋನಿಕದವರಿಗೆ 4:1–7

**ಕಡೇ ಮಾತೇನಂದರೆ, ಸಹೋದರರೇ, ನಾವು ಕರ್ತನಾದ ಯೇಸುವಿನ ಅಧಿಕಾರದಿಂದ ನಿಮಗೆ ಕೊಟ್ಟ ಆಜ್ಞೆಗಳನ್ನು ತಿಳಿದಿದ್ದೀರಷ್ಟೆ. ನೀವು ಹೇಗೆ ನಡೆದು ದೇವರನ್ನು ಮೆಚ್ಚಿಸಬೇಕೋ ಅದನ್ನು ನಮ್ಮಿಂದ ಕಲಿತುಕೊಂಡು ಅದರಂತೆ ನಡೆಯುತ್ತಲೇ ಇದ್ದೀರಿ. ನೀವು ಹಾಗೆಯೇ ಇನ್ನೂ ಹೆಚ್ಚಾಗಿ ನಡೆಯಬೇಕೆಂದು ನಿಮ್ಮನ್ನು ಬೇಡಿಕೊಂಡು ಯೇಸು ಕರ್ತನಲ್ಲಿ ಪ್ರಬೋಧಿಸುತ್ತೇವೆ. ದೇವರ ಚಿತ್ತವೇನಂದರೆ ನೀವು ಶುದ್ಧರಾಗಿರಬೇಕೆಂಬದೇ. ಅದದರಿಂದ ಹಾದರಕ್ಕೆ ದೂರವಾಗಿರಬೇಕು. ದೇವರನ್ನರಿಯದ ಅನ್ಯಜನಗಳಂತೆ ಕಾಮಾಭಿಲಾಷೆಗೆ ಒಳಪಡದೆ ನಿಮ್ಮಲ್ಲಿ ಪ್ರತಿಯೊಬ್ಬನು ಪವಿತ್ರವಾದ ಮನಸ್ಸಿನಿಂದಲೂ ಘನತೆಯಿಂದಲೂ ಧರ್ಮಪತ್ನಿಯನ್ನು ಸಂಪಾದಿಸಿಕೊಳ್ಳಲು ತಿಳಿಯಬೇಕು. ಈ ವಿಷಯದಲ್ಲಿ ಯಾರೂ ತನ್ನ ಸಹೋದರನನ್ನು ವಂಚಿಸಿ ಕೇಡುಮಾಡಬಾರದು. ನಾವು ಮುಂಚೆ ತಿಳಿಸಿ ನಿಮಗೆ ಖಂಡಿತವಾಗಿ ಹೇಳಿದ ಪ್ರಕಾರ ಇವೆಲ್ಲವುಗಳ ವಿಷಯದಲ್ಲಿ ಕರ್ತನು ಮುಯ್ಯಿಗೆ ಮುಯ್ಯಿ ತೀರಿಸುವವನಾಗಿದ್ದಾನೆ. ದೇವರು ನಮ್ಮನ್ನು ಬಂಡುತನಕ್ಕೆ ಕರೆಯದೆ ಶುದ್ಧರಾಗಿರುವದಕ್ಕೆ ಕರೆದನು.**

1 ಯೋಹಾನನು 3:1–3

**ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ. ಈ ಕಾರಣದಿಂದ ಲೋಕವು ನಮ್ಮನ್ನು ತಿಳಿದುಕೊಳ್ಳುವದಿಲ್ಲ, ಅದು ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ. ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ; ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು. ಆತನ ಮೇಲೆ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ.**

## ಅನ್ವಯ

1. ನಿಮ್ಮ ಗುಣಮಟ್ಟವು ಭಿನ್ನವಾಗಿರುತ್ತದೆ

ರೋಮಾಪುರದವರಿಗೆ 12:1, 2

**ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮ ನ್ನು ಬೇಡಿಕೊಳ್ಳುವುದೇನಂದರೆ–ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದು ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

2 ಕೊರಿಂಥದವರಿಗೆ 6:14–18

**ನೀವು ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ದೇವರ ಮಂದಿರಕ್ಕೂ ವಿಗ್ರಹ ಗಳಿಗೂ ಒಪ್ಪಿಗೆ ಏನು? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ. ಇದರ ಸಂಬಂಧವಾಗಿ ದೇವರು– ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ. ಆದದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ; ಅಶುದ್ಧವಾದ ಯಾವದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ. ಇದಲ್ಲದೆ– ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರೆಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ.**

2 ಕೊರಿಂಥದವರಿಗೆ 7:1

**ಪ್ರಿಯರೇ, ಈ ಮಾಗ್ದಾನಗಳು ನಮಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ.**

2. ನಿಮ್ಮ ಮೌಲ್ಯಗಳು ಭಿನ್ನವಾಗಿರುತ್ತವೆ.

ಯೋಹಾನನು 5:41,44

**ನಾನು ಮನುಷ್ಯರಿಂದಾಗುವ ಮಾನವನ್ನು ಅಂಗೀಕರಿಸುವದಿಲ್ಲ. ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ?**

3. ""ಪ್ರತ್ಯೇಕಿಸಲ್ಪಟ್ಟ'' ಜೀವನವನ್ನು ಜೀವಿಸುವುದು ಹಿಂಸೆ ಮತ್ತು ತಿರಸ್ಕಾರವನ್ನು ತರುತ್ತದೆ.

ಯೋಹಾನ 17:13–19

**ಆದರೆ ಈಗ ನಿನ್ನ ಬಳಿಗೆ ಬರುವವನಾಗಿದ್ದೇನೆ; ಆದದರಿಂದ ಇವರಲ್ಲಿ ನನ್ನ ಆನಂದವು ಪರಿಪೂರ್ಣವಾಗಿರುವಂತೆ ಲೋಕದಲ್ಲಿದ್ದು ಈ ಮಾತುಗಳನ್ನು ಆಡುತ್ತೇನೆ. ನಾನು ನಿನ್ನ ವಾಕ್ಯವನ್ನು ಇವರಿಗೆ ಕೊಟ್ಟಿದ್ದೇನೆ; ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ; ಆದಕಾರಣ ಲೋಕವು ಇವರ ಮೇಲೆ ದ್ವೇಷ ಮಾಡಿ ಅದೆ. ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವದಿಲ್ಲ; ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ. ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು; ನಿನ್ನ ವಾಕ್ಯವೇ ಸತ್ಯವು. ನೀನು**

**ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಇವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು. ಇವರು ನಿಜವಾಗಿ ಪ್ರತಿಷ್ಠಿತರಾಗಬೇಕೆಂದು ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಠೆಪಡಿಸಿಕೊಳ್ಳುತ್ತೇನೆ.**

2 ತಿಮೊಥೆಯನಿಗೆ 3:12

**ಕ್ರಿಸ್ತಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸುಮಾಡುವವರೆಲ್ಲರೂ ಹಿಂಸೆಗೊಳಗಾಗುವರು.**

4. ನಿಮ್ಮ ಸಾಕ್ಷಿಯ ಜೀವಿತವು ಪ್ರಾಮುಖ್ಯವಾಗಿರುತ್ತದೆ

1 ಪೇತ್ರನು 2:9

**ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ.**

ಜ್ಞಾನೋಕ್ತಿಗಳು 22:1

**ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ; ಬೆಳ್ಳಿ ಬಂಗಾರಕ್ಕಿಂತಲೂ ಸತ್ಕೀರ್ತಿಯು ಅಮೂಲ್ಯ.**

5. ದೇವರ ಪಾತ್ರೆಯಾಗಿ ಉಪಯೋಗವಾಗಲು ಒಂದು ಅವಶ್ಯಕತೆಯಿದೆ.

2 ತಿಮೊಥೆಯನಿಗೆ 2:19–21

**ಆದರೂ ದೇವರ ಸ್ಥಿರವಾದ ಅಸ್ತಿವಾರವು ನಿಲ್ಲುತ್ತದೆ. ಅದರ ಮೇಲೆ– ತನ್ನವರು ಯಾರಾರೆಂಬದನ್ನು ಕರ್ತನು ತಿಳಿದಿದ್ದಾನೆಂತಲೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟುಬಿಡಬೇಕೆಂತಲೂ ಲಿಪಿಯುಂಟು. ದೊಡ್ಡ ಮನೆಯಲ್ಲಿ ಬೆಳ್ಳಿಬಂಗಾರದ ಪಾತ್ರೆಗಳಲ್ಲದೆ ಮರದ ಪಾತ್ರೆಗಳೂ ಮಣ್ಣಿನ ಪಾತ್ರೆಗಳೂ ಇರುತ್ತವೆ; ಅವುಗಳಲ್ಲಿ ಕೆಲವು ಉತ್ತಮವಾದ ಬಳಕೆಗೂ ಕೆಲವು ಹೀನವಾದ ಬಳಕೆಗೂ ಬರುತ್ತವೆ. ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹವಾಸವನ್ನು ಬಿಟ್ಟು ತನ್ನನ್ನು ಶುದ್ಧಮಾಡಿಕೊಂಡರೆ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು; ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತವಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವುದಕ್ಕೆ ಸಿದ್ಧನಾಗಿಯೂ ಇರುವನು.**

ಕೀರ್ತನೆಗಳು 4:3

**ಯೆಹೋವನು ತನ್ನ ಭಕ್ತನನ್ನು ತನಗೋಸ್ಕರ ಪ್ರತ್ಯೇಕಿಸಿಕೊಂಡಿದ್ದಾನೆಂದು ತಿಳಿದುಕೊಳ್ಳಿರಿ. ನಾನು ಆತನಿಗೆ ಮೊರೆಯಿಡುವಾಗೆಲ್ಲ ಆತನು ಕೇಳುತ್ತಾನೆ.**

# ಅಧ್ಯಾಯ 5

# ಆಶೀರ್ವದಿಸ್ಪಟ್ಟವರು, ಸಮೃದ್ಧಿವುಳ್ಳವರು, ಮತ್ತು ಜಯಶಾಲಿಗಳು

## 5.1. ಆಶೀರ್ವದಿಸಲ್ಪಟ್ಟವರು

ಎಫೆಸದವರಿಗೆ 1:3

**ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ.**

ಯಾಕೋಬನು 1:27

**ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ.**

ಯಾಕೋಬನು 1:17

**ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ. ವ್ಯತ್ಯಾಸದ ಸೂಚನೆಯೂ ಇಲ್ಲ.**

ಕೀರ್ತನೆಗಳು 103:1–6

**ನನ್ನ ಮನವೇ, ಯೆಹೋವನನ್ನು ಕೊಂಡಾಡು; ನನ್ನ ಸರ್ವೇಂದ್ರಿಯಗಳೇ, ಆತನ ಪವಿತ್ರನಾಮವನ್ನು ಕೀರ್ತಿಸಿರಿ. ನನ್ನ ಮನವೇ, ಯೆಹೋವನನ್ನು ಕೊಂಡಾಡು; ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ. ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ, ಸಮಸ್ತರೋಗಗಳನ್ನು ವಾಸಿಮಾಡುವವನೂ, ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ, ಪ್ರೀತಿಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸುವವನು ಆಗಿದ್ದಾನೆ; ಶ್ರೇಷ್ಠವರಗಳಿಂದ ನಿನ್ನ ಆಶೆಯನ್ನು ಪೂರ್ತಿಗೊಳಿಸುತ್ತಾನೆ; ಹದ್ದಿಗೆ ಬರುವಂತೆಯೇ ನಿನಗೆ ಯೌವನವನ್ನು ತಿರಿಗಿ ಬರಮಾಡುತ್ತಾನೆ. ಯೆಹೋವನು ನೀತಿಯನ್ನು ಸಾಧಿಸುವವನಾಗಿ ಕುಗ್ಗಿಹೋದವರೆಲ್ಲರ ನ್ಯಾಯವನ್ನು ಸ್ಥಾಪಿಸುತ್ತಾನೆ.**

ರೋಮಾಪುರದವರಿಗೆ 8:32

**ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ?**

ಲೂಕ 12:32
**ಚಿಕ್ಕ ಹಿಂಡೇ, ಹೆದರಬೇಡ; ಆ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ.**

## 5.2. ಸಮೃದ್ಧಿವುಳ್ಳವರು

1 ಕೊರಿಂಥದವರಿಗೆ 1:5–7
**ಯಾಕೆಂದರೆ ಕ್ರಿಸ್ತನ ವಿಷಯವಾದ ಸಾಕ್ಷಿಯು ನಿಮ್ಮಲ್ಲಿ ದೃಡವಾಗಿ ನೆಲೆಗೊಂಡ ಕಾರಣ ನೀವು ಎಲ್ಲಾ ನುಡಿಯಲ್ಲಿಯೂ ಎಲ್ಲಾ ತಿಳುವಳಿಕೆಯಲ್ಲಿಯೂ ಆತನಲ್ಲಿ ಸಮೃದ್ಧಿ ಹೊಂದಿದವರಾಗಿದ್ದೀರಿ. ಹೀಗೆ ನೀವು ಯಾವ ಕೃಪಾವರದಲ್ಲಿಯೂ ಕೊರತೆಯಿಲ್ಲದವರಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇದ್ದೀರಿ.**

## 5.3. ಜಯಶಾಲಿಗಳು

2 ಕೊರಿಂಥದವರಿಗೆ 2:14
**ಕ್ರಿಸ್ತನ ಅನ್ಯೋನ್ಯತೆಯಲ್ಲಿ ನಮ್ಮನ್ನು ಯಾವಾಗಲೂ ಜಯೋತ್ಸವದೊಡನೆ ಮೆರೆಸುತ್ತಾ ಆತನ ವಿಷಯವಾದ ಜ್ಞಾನವೆಂಬ ಸುವಾಸನೆಯನ್ನು ನಮ್ಮ ಮೂಲಕ ಎಲ್ಲಾ ಸ್ಥಳಗಳಲ್ಲಿ ವ್ಯಾಪನಗೊಳಿಸುತ್ತಾ ಬರುವ ದೇವರಿಗೆ ಸ್ತೋತ್ರವು..**

ರೋಮಾಪುರದವರಿಗೆ 5:17
**ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.**

1 ಯೋಹಾನನು 5:1, 4
**ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಅವನು ತಂದೆಯಿಂದ ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ. ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸುವಂಥದ್ದು ನಮ್ಮ ನಂಬಿಕೆಯೇ.**

1 ಕೊರಿಂಥದವರಿಗೆ 15:57
**ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ.**

## ಅನ್ವಯ

1. ಕ್ರಿಸ್ತನಲ್ಲಿ, ನಾವು ಹೊಂದಿದ ಎಲ್ಲಾ ಒಳ್ಳೆಯ ಸಂಗತಿಗಳನ್ನೂ ಗುರುತಿಸಿರಿ.

ಫಿಲೆಮೋನನಿಗೆ 1:6
**ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯುನ್ನು ಹೊಂದುತ್ತಿರುವಲ್ಲಿ ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ.**

2. ಆಶೀರ್ವದಿಸಲ್ಪಟ್ಟವನು ಎಂಬ ಮನೋಭಾವವುಳ್ಳರಾಗಿರಬೇಕು–ನಿಮ್ಮ ಇಂದಿನ ಪರಿಸ್ಥಿತಿಯು ನಿಮ್ಮ ಕೊನೆಯ ತಲುಪಿಸಬೇಕಾದ ಸ್ಥಿತಿಯ ಸೂಚನೆಯಲ್ಲ. ಈಗಿನ ಕಾಲದ ಪರಿಸ್ಥಿತಿಯು (ಕಷ್ಟ, ಸಂಕಟ, ಹಿಂಸೆ ಮತ್ತು ಇತರೆ..) ನಮ್ಮ ಮುಂದಿನ ಕಾಲದ ಭವಿಷ್ಯವನ್ನು ಬದಲಾಯಿಸಲು ಸಾಧ್ಯವೇ ಇಲ್ಲ.

3. ದೇವರಲ್ಲಿ ನಿಮಗಿರುವ ಸಾಮರ್ಥ್ಯವನ್ನು ಗುರುತಿಸಬೇಕು.

2 ಕೊರಿಂಥದವರಿಗೆ 3:5
**ನಮ್ಮಿಂದಲೇ ಏನಾದರೂ ಉಂಟಾಯಿತೆಂದು ತೀರ್ಮಾನಿಸಿಕೊಳ್ಳುವದಕ್ಕೆ ನಮ್ಮಷ್ಟಕ್ಕೆ ನಾವೇ ಸಮರ್ಥರೆಂತಲ್ಲ; ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು.**

4. ನೀವು ಬಿಟ್ಟುಬಿಡಲು ನಿರಾಕರಿಸಿದರೆ ಜಯವು ನಿಮ್ಮದೆ.

1 ತಿಮೊಥೆಯನಿಗೆ 6:12
**ಕ್ರಿಸ್ತನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು, ನಿತ್ಯಜೀವವನ್ನು ಹಿಡಿದುಕೋ; ಅದಕ್ಕಾಗಿ ದೇವರು ನಿನ್ನನ್ನು ಕರೆದನು ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದಿಯಲ್ಲಾ.**

# ಅಧ್ಯಾಯ 6

# ಕ್ರಿಸ್ತನೊಂದಿಗೆ ಗುರುತಿಸಲ್ಪಟ್ಟಿದ್ದೀರಿ–ಶಿಲುಬೆಗೆ ಹಾಕಲ್ಪಟ್ಟಿದ್ದೀರಿ, ಹೂಣಲ್ಪಟ್ಟಿದ್ದೀರಿ, ಜೀವಿಸಲ್ಪಟ್ಟಿದ್ದೀರಿ, ಎಬ್ಬಿಸಲ್ಪಟ್ಟಿದ್ದೀರಿ ಮತ್ತು ಕೂಡ್ರಿಸಲ್ಪಟ್ಟಿದ್ದೀರಿ

ನಾವು ಕ್ರಿಸ್ತನಲ್ಲಿರುವ ಕಾರಣ ನಾವು ಆತನ ಶಿಲುಬೆ, ಮರಣ, ಪುನರುತ್ಥಾನ, ಆರೋಹಣ ಮತ್ತು ತಂದೆಯ ಬಲಗಡೆಯಲ್ಲಿ ಕುಳಿತುಕೊಳ್ಳುವ ಸ್ಥಾನದಲ್ಲಿ ಆತನೊಂದಿಗೆ ಗುರುತಿಸಲ್ಪಟ್ಟಿದ್ದೇವೆ.

ಕ್ರಿಸ್ತನೊಂದಿಗಿರುವ ವರ್ತಮಾನಕಾಲದ ನಮ್ಮ ಐಕ್ಯತೆಯು ಆತನು ಹಿಂದೆ ನಮಗೋಸ್ಕರ ಮಾಡಿರುವ ಸಾಧನೆಗಳ ಮೇಲೆ ಆದಾರಗೊಂಡಿದೆ. ಕ್ರಿಸ್ತನೊಂದಿಗಿರುವ ನಮ್ಮ ಐಕ್ಯತೆಯು ನಮ್ಮನ್ನು ಒಂದೇಯಾಗಿ ಮಾಡಿ ನಮ್ಮನ್ನು ಆತನ ಸಾಧನೆಗಳೊಂದಿಗೆ ಗುರುತಿಸಲ್ಪಟ್ಟಿದ್ದೇವೆ, ಎಂಬುದಾಗಿ ಪ್ರತಿಬಿಂಬಿಸುತ್ತದೆ.

2 ಕೊರಿಂಥದವರಿಗೆ 5:17

**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿಯಲ್ಲಾ ಹೋಗಿ ಎಲ್ಲಾ ನೂತನವಾಯಿತು.**

ರೋಮಾಪುರದವರಿಗೆ 6

**ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಅದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನು ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆಹೊಂದಿದ್ದಾನಷ್ಟೆ. ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ. ಯಾಕೆಂದರೆ ಕ್ರಿಸ್ತನು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದದರಿಂದ ಆತನು ಇನ್ನು ಮುಂದೆ**

**ಸಾಯತಕ್ಕವನಲ್ಲ, ಮರಣವು ಇನ್ನೂ ಆತನನ್ನು ಆಳುವದಿಲ್ಲವೆಂದು ನಮಗೆ ತಿಳಿದದೆ. ಅತನು ಸತ್ತದ್ದು ಒಂದೇ ಸಾರಿ, ಅದು ಪಾಪದ ಪಾಲಿಗೆ; ಆತನು ಜೀವಿಸುವದು ದೇವರಿಗಾಗಿಯೇ. ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ. ಹೀಗಿರುವರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ. ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗಮಾಡಬೇಡಿರಿ; ಆದರೆ ಸತ್ತವರೂಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಆತನಿಗೆ ಸಮರ್ಪಿಸಿರಿ. ಯಾಕೆಂದರೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅದೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ. ಹಾಗಾದರೇನು? ನಾವು ಧರ್ಮಶಾಸ್ತ್ರಾಧೀನರಲ್ಲ, ಕೃಪಾಧೀನರಾಗಿದ್ದೇವೆಂದು ಪಾಪವನ್ನು ಮಾಡಬಹುದೋ? ಎಂದಿಗೂ ಮಾಡಬಾರದು. ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿಕೊಡುತ್ತೀರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬದು ನಿಮಗೆ ಗೊತ್ತಿಲ್ಲವೋ? ಪಾಪಕ್ಕೆ ದಾಸರಾದರೆ ಮರಣವೇ ಫಲ; ನಂಬಿಕೆಯೆಂಬ ವಿದೇಯತ್ವಕ್ಕೆ ದಾಸರಾದರೆ ನೀತಿಯೇ ಫಲ. ಅದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃ ಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ. ನಿಮ್ಮ ನರಭಾವದ ಬಲಹೀನತೆಯ ದೆಸೆಯಿಂದ ಲೋಕರೀತಿಯಾಗಿ ಮಾತಾಡುತ್ತೇನೆ. ಅಧರ್ಮಮಾಡುವದಕ್ಕಾಗಿ ನಿಮ್ಮ ಅಂಗಗಳನ್ನು ಬಂಡುತನಕ್ಕೂ ಅಧರ್ಮಕ್ಕೂ ದಾಸರನ್ನಾಗಿ ಒಪ್ಪಿಸಿಕೊಟ್ಟಿದ್ದಂತೆಯೇ ಈಗ ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ. ನೀವು ಪಾಪಕ್ಕೆ ದಾಸರಾಗಿದ್ದಾಗ ನೀತಿಯ ಹಂಗಿನವರಾಗಿದ್ದಿಲ್ಲ. ಅದರೆ ನೀವು ಆಗ ಮಾಡಿದ ಕೃತ್ಯಗಳಿಂದ ನಿಮಗುಂಟಾದ ಫಲವೇನು? ಈಗ ಅವುಗಳ ವಿಷಯದಲ್ಲಿ ನಿಮಗೆ ನಾಚಿಕೆಯುಂಟಷ್ಟೆ. ಕಡೆಗೆ ಅವುಗಳಿಂದ ಬರುವದು ಮರಣವಲ್ಲವೇ. ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದದರಿಂದ ಪರಿಶುದ್ಧರಾಗುವದೇ ನಿಮಗೆ ಫಲ; ಕಡೆಗೆ ದೊರೆಯುವಂಥದು ನಿತ್ಯಜೀವ. ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ.**

ಕೊಲೊಸ್ಸೆಯವರಿಗೆ 2:11–13

**ಆತನು ಎಲ್ಲಾ ದೊರೆತನಗಳಿಗೂ ಅಧಿಕಾರಿಗಳಿಗೂ ಶಿರಸ್ಸು. ನೀವು ಅತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ; ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೊಣಲ್ಪಟ್ಟದ್ದರಿಂದಲೇ ಅ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಅತನ ಕೂಡ**

**ಎದ್ದು ಬಂದಿರಿ. ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ.**

ಎಫೆಸದವರಿಗೆ 2:1–7

**ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು. ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ. ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು. ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ) ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಅತನೊಂದಿಗೆ ಕೂಡ್ರಿಸಿದ್ದಾನೆ.**

- ಕ್ರಿಸ್ತನೊಂದಿಗೆ ಕ್ರೂಜೆಗೆ ಹಾಕಲ್ಪಟ್ಟಿದ್ದೇವೆ–ಪಾಪಧೀನವಾದ ಶರೀರ ಅಳಿದುಹೋಯಿತು
- ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದೇವೆ–ಹಳೆಯ ಜೀವಿತದಿಂದ ಬೇರ್ಪಟ್ಟಿದ್ದೇವೆ.
- ಕ್ರಿಸ್ತನೊಂದಿಗೆ ಸತ್ತವರಾದ ನಾವು ಬದುಕುವವರಾಗಿದ್ದೇವೆ–ನೂತನವಾದ ಜೀವಿತ ಕೊಡಲ್ಪಟ್ಟಿದೆ.
- ಕ್ರಿಸ್ತನೊಂದಿಗೆ ಪರಲೋಕದೊಳಗೆ ಎಬ್ಬಿಸಲ್ಪಟ್ಟಿದ್ದೇವೆ–ಈಗಿನ ಕಾಲ/ ಪ್ರಪಂಚದಿಂದ ಪ್ರತ್ಯೇಕಿಸಲ್ಪಟ್ಟಿದ್ದೇವೆ.
- ಕ್ರಿಸ್ತನೊಂದಿಗೆ ಕೂಡ್ರಿಸಲ್ಪಟ್ಟಿದ್ದೇವೆ–ಅತನೊಂದಿಗೆ ಆಳುವುದಕ್ಕೂ ಮತ್ತು ರಾಜ್ಯಭಾರಮಾಡುವುದಕ್ಕೂ ಸ್ಥಾನಮಾನಗಳು ದೊರಕಿವೆ.

## 6.1. ಕ್ರಿಸ್ತನೊಂದಿಗೆ ಕ್ರೊಜೆಗೆ ಹಾಕಲ್ಪಟ್ಟಿದ್ದೇವೆ–ಪಾಪಧೀನವಾದ ಶರೀರ ಅಳಿದುಹೋಯಿತು

ಗಲಾತ್ಯದವರಿಗೆ 2:20

**ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಅತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು.**

ಕೊಲೊಸ್ಸೆಯವರಿಗೆ 2:11

**ಆತನು ಎಲ್ಲಾ ದೊರೆತನಗಳಿಗೂ ಅಧಿಕಾರಿಗಳಿಗೂ ಶಿರಸ್ಸು. ನೀವು ಅತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ;**

## ಅನ್ವಯ

ಪಾಪಧೀನವಾದ ಶರೀರ–ಪಾಪದ ಶಕ್ತಿ–ಹಳೆಯ ಆ ಪಾಪ ಸ್ವಭಾವವು ಅಳಿದುಹೋಯಿತು. ಆದಕಾರಣ ನಿಮ್ಮನ್ನು ನೀವು ಪಾಪದ ಪಾಲಿಗೆ ಸತ್ತವರಾಗಿದ್ದೇವೆ ಎಂದು ಎಣಿಸಿಕೊಳ್ಳಿ.

ರೋಮಾಪುರದವರಿಗೆ ಬರೆದ ಪತ್ರಿಕೆ 6ನೇ ಅಧ್ಯಾಯದಲ್ಲಿ ಮೂರು ಪ್ರಾಮುಖ್ಯವಾದ ಪದಗಳು ಉಪಯೋಗಿಸಲ್ಪಟ್ಟಿವೆ:

**"ತಿಳಿದಿಕೊ"–** ಸತ್ಯವನ್ನು ತಿಳಿದುಕೊಳ್ಳಿರಿ. ನೀವು ಕ್ರೋಜೆಗೆ ಹಾಕಲ್ಪಟ್ಟು, ಹೂಣಲ್ಪಟ್ಟು, ಮತ್ತು ಎಬ್ಬಿಸಲ್ಪಟ್ಟಿರುವಿರಿ

**"ಎಣಿಸಿಕೊ"–** ಸತ್ಯವನ್ನು ಅಂಗೀಕರಿಸಿರಿ. ಇದು ಸತ್ಯಸಂಗತಿಯೆಂದು ಅಂಗೀಕರಿಸಬೇಕು.

**"ಅರ್ಪಿಸಿಕೊಡು"–** ನಿಮ್ಮನ್ನು ಕರ್ತನಿಗೆ ಕೊಡಿರಿ.

## 6.2. ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದೇವೆ–ಹಳೆಯ ಜೀವಿತದಿಂದ ಬೇರ್ಪಟ್ಟಿದ್ದೇವೆ

ಎಫೆಸದವರಿಗೆ 4:21–25

**ಆತನನ್ನೇ ಕೇಳಿದಿರಲ್ಲಾ, ಆತನಲ್ಲಿಯೇ ಉಪದೇಶವನ್ನು ಹೊಂದಿದಿರಲ್ಲಾ. ಯೇಸುವಿನಲ್ಲಿರುವ ಸತ್ಯೋಪದೇಶವು ಯಾವದಂದರೆ– ನೀವು ನಿಮ್ಮ ಹಿಂದಿನ ನಡತೆಯುನ್ನು ಅನುಸರಿಸದೆ ಪೂರ್ವಸ್ವಭಾವವನ್ನು ತೆಗೆದುಹಾಕಿಬಿಡಬೇಕು; ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟುಹೋಗುವಂಥದ್ದು. ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನಸ್ವಭಾವವನ್ನು ಧರಿಸಿಕೊಳ್ಳಿರಿ. ಅ ಸ್ವಭಾವವು ದೇವರ ಹೋಲಿಕೆಯು ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯುವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ. ಆದಕಾರಣ ಸುಳ್ಳಾಡುವದನ್ನು ಬಿಟ್ಟು ಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ; ಯಾಕಂದರೆ ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವಲ್ಲಾ.**

ಕೊಲೊಸ್ಸೆಯವರಿಗೆ 3:3

**ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ.**

### ಅನ್ವಯ

ನಿಮ್ಮ ಹಳೆಯ ಜೀವಿತದಿಂದ ಪ್ರತ್ಯೇಕಿಸಲ್ಪಟ್ಟಿದ್ದಿರಿ. ಆದಕಾರಣ ನಿಮ್ಮ ಹಳೆಯ ಜೀವಿತದ ಶೈಲಿಯನ್ನು ತೆಗೆದುಹಾಕಿ.

## 6.3. ಕ್ರಿಸ್ತನೊಂದಿಗೆ ಸತ್ತವರಾದ ನಾವು ಬದುಕುವವರಾಗಿದ್ದೇವೆ–ನೂತನವಾದ ಜೀವಿತ ಕೊಡಲ್ಪಟ್ಟಿದೆ

ಎಫೆಸದವರಿಗೆ 2:1–3

**ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು. ನೀವು ಪೂರ್ವ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯುತೆಗೆ ಈಗ ಪ್ರೇರೆಪಿಸುವ ಅತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ. ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು.**

### ಅನ್ವಯ

ನೂತನ ಸೃಷ್ಟಿಯ ಜೀವಿತವನ್ನು ಜೀವಿಸಿರಿ.

## 6.4. ಕ್ರಿಸ್ತನೊಂದಿಗೆ ಪರಲೋಕದೊಳಗೆ ಎಬ್ಬಿಸಲ್ಪಟ್ಟಿದ್ದೇವೆ–ಪ್ರಸ್ತುತ ಕಾಲದ/ ಪ್ರಪಂಚದಿಂದ ಪ್ರತ್ಯೇಕಿಸಲ್ಪಟ್ಟಿದ್ದೇವೆ

ಎಫೆಸದವರಿಗೆ. 2:6

**ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯನ್ನು ಮಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಅತನೊಂದಿಗೆ ಕೂಡ್ರಿಸಿದ್ದಾನೆ.**

ಕೊಲೊಸ್ಸೆಯವರಿಗೆ 3:1,3

**ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನೇ ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಅಸನಾರೂಢನಾಗಿದ್ದಾನೆ. ಯಾಕೆಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ.**

ಗಲಾತ್ಯದವರಿಗೆ 6:14

**ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ. ಅತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು. ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೆನು.**

### ಅನ್ವಯ

ಪ್ರಸ್ತುತ ಪ್ರಪಂಚದಿಂದ ಪ್ರತ್ಯೇಕಿಸಲ್ಪಟ್ಟಿದ್ದಿರಿ. ಅದಕಾರಣ ಮೇಲಿರುವವುಗಳ ಮೇಲೆ ನಿಮ್ಮ ಮನಸ್ಸನ್ನು ಇಡಿರಿ.

## 6.5. ಕ್ರಿಸ್ತನೊಂದಿಗೆ ಕೂಡ್ರಿಸಲ್ಪಟ್ಟಿದ್ದೇವೆ–ಅತನೊಂದಿಗೆ ಆಳುವುದಕ್ಕೂ ಮತ್ತು ರಾಜ್ಯಭಾರಮಾಡುವುದಕ್ಕೂ ಸ್ಥಾನಮಾನಗಳು ದೊರಕಿವೆ

ಎಫೆಸದವರಿಗೆ 2:6

**ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯನ್ನು ಮಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಅತನೊಂದಿಗೆ ಕೂಡ್ರಿಸಿದ್ದಾನೆ.**

### ಅನ್ವಯ

ನಿಮ್ಮ ಅಧಿಕಾರವನ್ನು ಉಪಯೋಗಿಸಿ.

# ಅಧ್ಯಾಯ 7

# ವಿಮೋಚಿಸಲ್ಪಟ್ಟಿದ್ದೇವೆ ಮತ್ತು ಬಿಡುಗಡೆ ಹೊಂದಿದ್ದೇವೆ

ಎಫೆಸದವರಿಗೆ 1:7

**ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ.**

ಕೊಲೊಸ್ಸೆಯವರಿಗೆ 1:12–14

**ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗರರಾಗುವದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ ತಂದೆಗೆ ಕೃತಜ್ಞತಾಸ್ತುತಿ ಮಾಡುವರಾಗಿರಬೇಕೆಂತಲೂ ದೇವರನ್ನು ಬೇಡಿಕೊಳ್ಳುತ್ತೇವೆ. ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.**

ಗ್ರೀಕ್ ಭಾಷೆಯಲ್ಲಿ "ಅಗಿರಿಜೊ" (agaridzo) ಅಂದರೆ "ಕೊಂಡುಕೊಳ್ಳುವುದು" ಗ್ರೀಕ್ ಪದವು "ವಿಮೋಚನೆ"ಯನ್ನು ತಿಳಿಸಲು ಭಾಷಾಂತರಗೊಂಡಿದೆ. "ಮಾರುಕಟ್ಟೆಗೆ ಹೋಗುವುದು" ನಿರ್ದಿಷ್ಟವಾಗಿ ಗುಲಾಮರ ಮಾರುಕಟ್ಟೆ ಬಗ್ಗೆ ತಿಳಿಸಲು ಮಾರುಕಟ್ಟೆ ಸ್ಥಳ ಉಪಯೋಗಿಸಲ್ಪಟ್ಟಿದೆ.

1 ಕೊರಿಂಥದವರಿಗೆ 6:20

**ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ.**

ಪ್ರಕಟಣೆ 5:9,10

**ಅವರು ಹೊಸ ಹಾಡನ್ನು ಹಾಡುತ್ತಾ– ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವದಕ್ಕೆ ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ; ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು ಎಂದು ಹೇಳಿದನು.**

ಗೀಕ್ ಭಾಷೆಯಲ್ಲಿ "ಎಕ್ಸ್‌ಗಾರಿಜೋ" (Exagridzo)ಅಂದರೆ ಆಳುಗಳನ್ನು ಮಾರುವ ಮಾರುಕಟ್ಟೆಯ ಸ್ಥಳಗಳಿಂದ ಆಳುಗಳನ್ನು ಖರೀದಿಸುವುದು.

ಗಲಾತ್ಯದವರಿಗೆ 3:13,14

**ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.**

ಗಲಾತ್ಯದವರಿಗೆ 4:4,5

**ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು.**

ಗ್ರೀಕ್ ಭಾಷೆಯಲ್ಲಿ **"ಲುಟ್ರೋ"** (Lutroo) ಅಂದರೆ ಸೆರೆಯಾಳುಗಳಿಗೆ ಒತ್ತೆ ಹಣ ಕೊಟ್ಟು ಬಿಡುಗಡೆಗೊಳಿಸುವುದು.

ತೀತನಿಗೆ 2:14

**ಆತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವುದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ ಸ್ವಕೀಯಜನರನ್ನು ತನಗಾಗಿ ಪರಿಶುದ್ಧಮಾಡುವದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು.**

ಗ್ರೀಕ್ ಭಾಷೆಯಲ್ಲಿ **"ಆಂಟಿಲುಟ್ರೋನ್"** (Antilutron) ಅಂದರೆ ಒತ್ತೆಯ ಹಣ, ಬಿಡುಗಡೆಯ ಹಣ

1 ತಿಮೊಥೆಯನಿಗೆ 2:5,6

**ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯನಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಅತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು.**

ಗ್ರೀಕ್ ಭಾಷೆಯಲ್ಲಿ **"ಅಪೊಲುಟ್ರೋಸಿಸ್"** ಅಂದರೆ ನಮ್ಮ ಹಿಂದಿನ ಸ್ಥಿತಿಗೆ ಮರಳುವುದಕ್ಕಾಗಿ ವಿಮೋಚನಾ ಶುಲ್ಕ ಕೊಡುವುದಾಗಿದೆ.

ಎಫೆಸದವರಿಗೆ 1:7

**ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ.**

1 ಕೊರಿಂಥದವರಿಗೆ 1:30
**ನೀವು ಕ್ರಿಸ್ತ ಯೇಸುವಿನಲ್ಲಿರುವದು ಆತನಿಂದಲೇ; ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು.**

## 7.1. ನಾವು ಯಾವುದರಿಂದ ವಿಮೋಚಿಸಲ್ಪಟ್ಟಿದ್ದೇವೆ?

### 7.1.1. ಕತ್ತಲೆಯ ಆಡಳಿತದಿಂದ

ಕೊಲೊಸ್ಸೆಯವರಿಗೆ 1:13,14
**ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.**

### 7.1.2 ಧರ್ಮಶಾಸ್ತ್ರದ ಶಾಪದಿಂದ

ಗಲಾತ್ಯದವರಿಗೆ 3:13
**ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.**

### 7.1.3 ಎಲ್ಲಾ ಅನೀತಿ ಕಾರ್ಯಗಳಿಂದ

ತೀತನಿಗೆ 2:14
**ಆತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವುದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧಮಾಡುವದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು.**

### 7.1.4 ಈ ಪ್ರಸ್ತುತ ಕೆಟ್ಟ ಯುಗದಿಂದ

ಗಲಾತ್ಯದವರಿಗೆ 1:3,4
**ತಂದೆಯಾದ ದೇವರಿಂದಲೂ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. ಈತನು ನಮ್ಮನ್ನು ಕೆಟ್ಟದ್ದಾಗಿರುವ ಈಗಿನ ದುಷ್ಟಯುಗದೊಳಗಿಂದ ಬಿಡಿಸಬೇಕೆಂದು ನಮ್ಮ ತಂದೆಯಾದ ದೇವರ ಚಿತ್ತಕ್ಕೆ ಅನುಸಾರವಾಗಿ ನಮ್ಮ ಪಾಪಗಳ ದೆಸೆಯಿಂದ ತನ್ನನ್ನು ಮರಣಕ್ಕೆ ಒಪ್ಪಿಸಿದನು.**

### 7.1.5 ಮರಣದ ಭಯದಿಂದ

ಇಬ್ರಿಯರಿಗೆ 2:14,15

**ಇದಲ್ಲದೆ ಮಕ್ಕಳು ರಕ್ತಮಾಂಸಧಾರಿಗಳಾಗಿರುವದರಿಂದ ಆತನೂ ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಿಗಿಸಿಬಿಡುವದಕ್ಕೂ ಮರಣಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸತ್ವದೊಳಗಿದ್ದವರನ್ನು ಬಿಡಿಸುವದಕ್ಕೂ ಅವರಂತೆ ರಕ್ತಮಾಂಸಧಾರಿಯಾದನು.**

### 7.1.6 ನಮ್ಮ ಪೂರ್ವಿಕರ ವ್ಯರ್ಥವಾದ ನಡವಳಿಕೆಯಿಂದ

1 ಪೇತ್ರನು 1:18,19

**ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿ ಬಂಗಾರ ಮೊದಲಾದ ನಶಿಸಿ ಹೋಗುವ ವಸ್ತುಗಳಿಂದಲ್ಲ, ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ.**

## 7.2. ದೇವರಿಗೆ ಪುನಃಸ್ಥಾಪಿಸಲ್ಪಟ್ಟಿದ್ದೇವೆ

ರೋಮಾಪುರದವರಿಗೆ 5:11

**ಇಷ್ಟು ಮಾತ್ರವೇ ಅಲ್ಲದೆ ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಸಮಾಧಾನ ಸ್ಥಿತಿ ಹೊಂದಿದವರಾಗಿ ಆತನ ಮುಖಾಂತರ ದೇವರಲ್ಲಿ ಹರ್ಷಗೊಳ್ಳುತ್ತೇವೆ.**

ಗ್ರೀಕ್‌ನಲ್ಲಿ **"ಕಟಾಲೆಜ್"** (kattallage = ಪ್ರಾಯಶ್ಚಿತ ಯಜ್ಞ.) ಹಣ ಪರಿವರ್ತಕರು, ಸಮಾನ ಮೌಲ್ಯಗಳನ್ನು ವಿನಿಮಯ ಮಾಡುವವರ ವ್ಯಾಪಾರದ ವಿನಿಮಯವಾಗಿದೆ.

= ವ್ಯತ್ಯಾಸದ ಹೊಂದಾಣಿಕೆ, ಸಮನ್ವಯ, ದಯಾ ಪುನಃ ಸ್ಥಾಪನೆ. ಹೊಸ ಒಡಂಬಡಿಕೆಯಲ್ಲಿ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು, ಪರಿಹಾರಕ್ಕಾಗಿ ಪ್ರಾಣ ಕೊಟ್ಟ ಕ್ರಿಸ್ತನ ಮೇಲೆ ಅವರ ಭರವಸೆಯಿಟ್ಟು ದಯೆಯಿಂದ ಪುನಃಸ್ಥಾಪಿಸಲ್ಪಟ್ಟವರನ್ನು ಸೂಚಿಸುತ್ತದೆ.

## 7.3. ಕ್ರಿಸ್ತನು ನಮ್ಮ ವಿಮೋಚನೆಯಾಗಿದ್ದಾನೆ

1 ಕೊರಿಂಥದವರಿಗೆ 1:30

**ನೀವು ಕ್ರಿಸ್ತ ಯೇಸುವಿನಲ್ಲಿರುವುದು ಆತನಿಂದಲೇ; ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ಮತ್ತು ವಿಮೋಚನೆಗಳಿಗೆ ಕಾರಣನಾಗಿದ್ದಾನೆ.**

## ಅನ್ವಯ

1. ನಿಮ್ಮ ವಿಮೋಚನೆಯ ವಾಸ್ತವಿಕತೆ ತಿಳಿಯಿರಿ.

2. ಹಾಗೆಯೇ ಹೇಳಿರಿ.

ಕೀರ್ತನೆಗಳು 107:2
**ಯೆಹೋವನ ವಿಮುಕ್ತರು ಅಂದರೆ ಆತನು ಶತ್ರುಗಳಿಂದ ಬಿಡಿಸಿ ಪೂರ್ವ ಪಶ್ಚಿಮೋತ್ತರಗಳಲ್ಲಿಯೂ ಸಮುದ್ರದ ಕಡೆಯಲ್ಲಿಯೂ ಇರುವ ದೇಶಗಳಿಂದ ಕೂಡಿಸಿದವರೆಲ್ಲರೂ ಸ್ತುತಿ ಮಾಡಲಿ. ಕರ್ತನಿಂದ ವಿಮೋಚಿಸಲ್ಪಟ್ಟವರು ಅಂದರೆ ಶತ್ರುಗಳಿಂದ ಬಿಡುಗಡೆಹೊಂದಿದವರು ಹೀಗೇ ಹೇಳಿ ಆತನನ್ನು ಸ್ತುತಿಸಲಿ.**

2. ಬಿಡುಗಡೆಯಾದವರಂತೆ ನಡೆಯಿರಿ

ಪ್ರಕಟಣೆ 12:11
**ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು.**

# ಅಧ್ಯಾಯ 8

# ಸ್ವತಂತ್ರರಾಗಿದ್ದೇವೆ

## 8.1. ಧರ್ಮಶಾಸ್ತ್ರದ ದಾಸತ್ವದಿಂದ ಸ್ವತಂತ್ರತೆ

ಗಲಾತ್ಯದವರಿಗೆ 2:3, 4, 16

**ನನ್ನ ಜೊತೆಯಲ್ಲಿದ್ದ ತೀತನು ಗ್ರೀಕನಾಗಿದ್ದರೂ ಅವನಿಗೆ ಸುನ್ನತಿಯಾಗಬೇಕೆಂದು ಯಾರೂ ಬಲಾತ್ಕಾರಮಾಡಲಿಲ್ಲ. ಸಭೆಗೆ ಕಳ್ಳತನದಿಂದ ಸೇರಿಕೊಂಡ ಸುಳ್ಳು ಸಹೋದರರು ಅಲ್ಲಿ ಇದ್ದದರಿಂದ ಬಲಾತ್ಕಾರನಡೆದೀತೆಂಬ ಭಯವಿತ್ತು. ಅವರು ನಮ್ಮನ್ನೂ ದಾಸತ್ವದೊಳಗೆ ಸಿಕ್ಕಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿ ನಮಗೆ ದೊರಕಿರುವ ಸ್ವಾತಂತ್ರ್ಯವನ್ನು ಗೂಢವಾಗಿ ವಿಚಾರಿಸುವದಕ್ಕೆ ಮರಸಿಕೊಂಡು ಬಂದವರು. ಆದರೂ ಯಾವನಾದರೂ ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲವೆಂಬದು ನಮಗೆ ತಿಳಿದಿರುವದರಿಂದ ನಾವು ಸಹ ನೇಮನಿಷ್ಠೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕಾಗಿ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟೆವು; ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.**

ಗಲಾತ್ಯದವರಿಗೆ 5:6

**ಕ್ರಿಸ್ತ ಯೇಸುವಿನಲ್ಲಿರುವವರಿಗೆ ಸುನ್ನತಿಯಾದರೂ ಪ್ರಯೋಜನವಿಲ್ಲ ಆಗದಿದ್ದರೂ ಪ್ರಯೋಜನವಿಲ್ಲ. ಪ್ರೀತಿಯಿಂದ ಕೆಲಸನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗಿದೆ.**

ಗಲಾತ್ಯದವರಿಗೆ 6:15

**ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು.**

ರೋಮಾಪುರದವರಿಗೆ 7:4

**ನೀವು ಸಹ ಕ್ರಿಸ್ತನ ದೇಹದ ಮೂಲಕವಾಗಿ ಧರ್ಮಶಾಸ್ತ್ರದ ಪಾಲಿಗೆ ಸತ್ತಿರಿ. ದೇವರಿಗೆ ಫಲವಾಗುವದಕ್ಕಾಗಿ ಮತ್ತೊಬ್ಬನನ್ನು ಅಂದರೆ ಸತ್ತು ಜೀವಿತನಾಗಿ ಎದ್ದಾತನನ್ನು ಸೇರಿಕೊಂಡಿರಿ.**

### ಅನ್ವಯ

1. ನೀನು ಒಂದು ಧರ್ಮಕ್ಕೆ ಸಂಬಂಧಪಟ್ಟವನಲ್ಲ. ನೀನು ಒಬ್ಬ ವ್ಯಕ್ತಿಗೆ ಸಂಬಂದಪಟ್ಟವನು.

2. ನೀನು ಒಂದು ಧಾರ್ಮಿಕ ಪದ್ಧತಿಗನುಸಾರವಾಗಿ ಜೀವಿಸಬೇಕಾಗಿಲ್ಲ. ನೀನು ಕ್ರಿಸ್ತ ಯೇಸುವಿನಲ್ಲಿ ಜೀವಿಸುತ್ತಾ ಇರುವಿರಿ.

## 8.2. ದುರ್ಬಲ ಮತ್ತು ನಿಷ್ಪ್ರಯೋಜಕ ಆಚರಣೆಗಳಿಂದ ಸ್ವತಂತ್ರತೆ

ಗಲಾತ್ಯದವರಿಗೆ 4:6–11

**ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು. ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ. ಪೂರ್ವಕಾಲದಲ್ಲಿ ನೀವು ದೇವರ ಜ್ಞಾನವಿಲ್ಲದವರಾಗಿ ದೇವರಲ್ಲದವುಗಳಿಗೆ ಅಧೀನರಾಗಿದ್ದಿರಿ. ಈಗಲಾದರೋ ನೀವು ದೇವರನ್ನು ತಿಳುಕೊಂಡಿದ್ದೀರಿ; ಸರಿಯಾಗಿ ಹೇಳಬೇಕಾದರೆ ದೇವರು ನಿಮ್ಮನ್ನು ತಿಳುಕೊಂಡಿದ್ದಾನೆ. ಹೀಗಿರಲಾಗಿ ನೀವು ಕೆಲಸಕ್ಕೆ ಬಾರದ ದರಿದ್ರಬಾಲಬೋಧೆಗೆ ಮತ್ತೂ ಅಧೀನರಾಗಬೇಕೆಂದು ಅಪೇಕ್ಷಿಸಿ ಪುನಃ ಅದಕ್ಕೆ ತಿರುಗಿಕೊಳ್ಳುವದು ಹೇಗೆ? ನೀವು ಆಯಾ ದಿನಗಳನ್ನೂ ಮಾಸಗಳನ್ನೂ ಉತ್ಸವಕಾಲಗಳನ್ನು ಸಂವತ್ಸರಗಳನ್ನೂ ನಿಷ್ಠೆಯಿಂದ ಆಚರಿಸುತ್ತೀರಿ. ನಾನು ನಿಮಗೋಸ್ಕರ ಪ್ರಯಾಸಪಟ್ಟದ್ದು ನಿಷ್ಫಲವಾಯಿತೋ ಏನೋ ಎಂದು ನಿಮ್ಮ ವಿಷಯದಲ್ಲಿ ಭಯಪಡುತ್ತೇನೆ.**

ಫಿಲಿಪ್ಪಿಯವರಿಗೆ 3:3

**ನಿಜವಾದ ಸುನ್ನತಿಯವರು ಯಾರೆಂದರೆ– ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರೂ ಶರೀರಸಂಬಂಧವಾದವುಗಳಲ್ಲಿ ಭರವಸವಿಲ್ಲದವರೂ ಆಗಿರುವ ನಾವೇ.**

## 8.3. ಮಾನವ ನಿರ್ಮಿತ ನಿಯಮಗಳು ಮತ್ತು ಕಲ್ಪನೆಗಳಿಂದ ಸ್ವತಂತ್ರತೆ

ಕೊಲೊಸ್ಸೆಯವರಿಗೆ 2:18–23

**ಕೆಲವರು ಅತಿ ವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿದ್ದಾರೆ. ತಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುತ್ತಾರೆ, ಮತ್ತು ಪ್ರಾಪಂಚಿಕ ಬುದ್ಧಿಯಿಂದ ನಿರಾಧಾರವಾಗಿ ಉಬ್ಬಿಕೊಂಡಿದ್ದಾರೆ, ಆದರೆ ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ. ಇಂಥವರು ನಿಮಗೆ ದೊರಕಿರುವ ಬಿರುದನ್ನು ಅಪಹರಿಸುವದಕ್ಕೆ ಅವಕಾಶಕೊಡಬೇಡಿರಿ. ಆ ಶಿರಸ್ಸಿನಿಂದಲೇ ದೇಹವೆಲ್ಲಾ ಕೀಲುನರಗಳ ಮೂಲಕ ಬೇಕಾದ ಸಹಾಯವನ್ನು ಹೊಂದಿ ಒಂದಾಗಿ ಕೊಡಿಸಲ್ಪಟ್ಟು ದೇವರು ಕೊಡುವ ವೃದ್ಧಿಯಿಂದ ಅಭಿವೃದ್ಧಿಯಾಗುತ್ತಾ ಬರುತ್ತದೆ. ಪ್ರಾಪಂಚಿಕ ಬಾಲಬೋಧೆಯ ಪಾಲಿಗೆ ನೀವು ಕ್ರಿಸ್ತನೊಂದಿಗೆ ಸತ್ತವರಾಗಿದ್ದ ಮೇಲೆ ಇನ್ನೂ ಪ್ರಾಪಂಚಿಕರಾಗಿ ಬದುಕುವವರಂತೆ ಮನುಷ್ಯಕಲ್ಪಿತ ಆಜ್ಞೆಗಳನ್ನೂ ಉಪದೇಶಗಳನ್ನೂ ಅನುಸರಿಸಿ– ಇದನ್ನು ಹಿಡಿಯಬೇಡ, ಇದನ್ನು ರುಚಿನೋಡಬೇಡ, ಅದನ್ನು ಮುಟ್ಟಬೇಡ ಎನ್ನುವ ನಿಬಂಧನೆಗಳಿಗೆ ನಿಮ್ಮನ್ನು**

**ಒಳಗಾಗವಮಾಡಿಕೊಳ್ಳುವದೇಕೆ? ಆ ಪದಾರ್ಥಗಳೆಲ್ಲವೂ ಬಳಸುವದರಲ್ಲಿ ನಾಶವಾಗುತ್ತವೆ. ಅಂಥ ಉಪದೇಶಗಳು ಸ್ವಕಲ್ಪಿತಾಚಾರವನ್ನು ಅತಿವಿನಯವನ್ನೂ ದೇಹದಂಡನೆಯನ್ನೂ ಬೋಧಿಸುತ್ತಾ ಹೆಸರಿಗೆ ಮಾತ್ರ ಜ್ಞಾನವೆನಿಸಿಕೊಳ್ಳುತ್ತವೆಯಲ್ಲದೆ ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸುವದರಲ್ಲಿ ಯಾವ ಪ್ರಯೋಜನಕ್ಕೂ ಬರುವದಿಲ್ಲ.**

## 8.4. ನಿಮಗಿರುವ ಸ್ವತಂತ್ರತೆಯಲ್ಲಿ ಸ್ಥಿರವಾಗಿ ನಿಲ್ಲಿರಿ

ಗಲಾತ್ಯದವರಿಗೆ 5:1
**ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗೆ ಸಿಕ್ಕಿಕೊಳ್ಳಬೇಡಿರಿ.**

ಮನುಷ್ಯ ಕಲ್ಪಿತವಾದ ಯಾವುದೇ ಉಪದೇಶಗಳಿಗೆ ಮತ್ತು ಧರ್ಮಾಚರಣೆ ಮುಂತಾದವುಗಳ ಬಂಧನಕ್ಕೆ ಒಳಗಾಗಬೇಡಿರಿ.

## 8.5. ನಿಮ್ಮ ಸ್ವತಂತ್ರತೆಯನ್ನು ದುರುಪಯೋಗ ಮಾಡಬೇಡಿರಿ

ಗಲಾತ್ಯದವರಿಗೆ 5:13,14
**ಸಹೋದದರರೇ, ನೀವು ಸ್ವತಂತ್ರರಾಗಿರಬೇಕೆಂದು ದೇವರು ನಿಮ್ಮನ್ನು ಕರೆದನು. ಆದರೆ ನಿಮಗಿರುವ ಸ್ವಾತಂತ್ರ್ಯವನ್ನು ಶರೀರಾಧೀನಸ್ವಭಾವಕ್ಕೆ ಆಸ್ಪದವಾಗಿ ಬಳಸದೆ ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡಿರಿ. ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು ಎಂಬ ಒಂದೇ ಮಾತಿನಲ್ಲಿ ಧರ್ಮಶಾಸ್ತ್ರವೆಲ್ಲಾ ಅಡಕವಾಗಿದೆ.**

ರೋಮಾಪುರದವರಿಗೆ 13:1–7
**ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ; ಯಾಕಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವದಿಲ್ಲ; ಇರುವ ಅಧಿಕಾರಿಗಳು ದೇವರಿಂದ ನೇಮಿಸಲ್ಪಟ್ಟವರು. ಆದದರಿಂದ ಅಧಿಕಾರಕ್ಕೆ ಎದುರುಬೀಳುವವನು ದೇವರ ನೇಮಕವನ್ನು ಎದುರಿಸುತ್ತಾನೆ; ಎದುರಿಸುವವರು ಶಿಕ್ಷೆಗೊಳಗಾಗುವರು. ಕೆಟ್ಟ ಕೆಲಸ ಮಾಡುವವನಿಗೆ ಅಧಿಪತಿಯಿಂದ ಭಯವಿರುವದೇ ಹೊರತು ಒಳ್ಳೇ ಕೆಲಸ ಮಾಡುವವನಿಗೆ ಭಯವೇನೂ ಇಲ್ಲ. ನೀನು ಅಧಿಕಾರಿಗೆ ಭಯಪಡದೆ ಇರಬೇಕೆಂದು ಆಪೇಕ್ಷಿಸುತ್ತೀಯೋ? ಒಳ್ಳೇದನ್ನು ಮಾಡು; ಆಗ ಆ ಅಧಿಕಾರಿಯಿಂದಲೇ ನಿನಗೆ ಹೊಗಳಿಕೆಯುಂಟಾಗುವದು; ಅವನು ನಿನ್ನ ಹಿತಕೋಸ್ಕರ ದೇವರ ಸೇವಕನಾಗಿದ್ದಾನಲ್ಲಾ. ಆದರೆ ನೀನು ಕೆಟ್ಟದ್ದನ್ನು ಮಾಡಿದರೆ ಭಯಪಡಬೇಕು; ಅವನು ಸುಮ್ಮನೆ ಕೈಯಲ್ಲಿ ಕತ್ತಿಯನ್ನು ಹಿಡಿದಿಲ್ಲ; ಅವನು ದೇವರ ಸೇವಕನಾಗಿದ್ದು ಕೆಟ್ಟದ್ದನ್ನು ನಡಿಸುವವನಿಗೆ ದೇವರ ದಂಡನೆಯನ್ನು ವಿಧಿಸುತ್ತಾನೆ. ಆದಕಾರಣ ದಂಡನೆಯಾದೀತೆಂದು ಮಾತ್ರವಲ್ಲದೆ ಮನಸ್ಸಿಗೆ ನ್ಯಾಯವಾಗಿ ತೋರುವದರಿಂದಲೂ ಅವನಿಗೆ ಅಧೀನನಾಗುವದು ಅವಶ್ಯ. ಈ ಕಾರಣದಿಂದಲೇ ನೀವು ಕಂದಾಯನ್ನು ಕೊಡ ಕೊಡುತ್ತೀರಿ. ಯಾಕೆಂದರೆ ಕಂದಾಯ ಎತ್ತುವವರು ದೇವರ ಉದ್ಯೋಗಿಗಳಾಗಿದ್ದು ಆ ಕೆಲಸದಲ್ಲಿಯೇ ನಿರತರಾಗಿರುತ್ತಾರೆ. ಅವರವರಿಗೆ**

**ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ; ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ.**

ಎಫೆಸದವರಿಗೆ 6:5–9

**ದಾಸತ್ವದಲ್ಲಿರುವವರೇ, ಈ ಲೋಕದಲ್ಲಿ ನಿಮಗೆ ಯಜಮಾನರಾಗಿರುವವರಿಗೆ ಕ್ರಿಸ್ತನಿಗೆಂದು ಮನೋಭೀತಿಯಿಂದ ನಡುಗುವವರಾಗಿಯೂ ಸರಳ ಹೃದಯರಾಗಿಯೂ ವಿಧೇಯರಾಗಿರಿ. ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆ ಮಾಡದೆ ಕ್ರಿಸ್ತನ ದಾಸರಿಗೆ ತಕ್ಕ ಹಾಗೆ ದೇವರ ಚಿತ್ತವನ್ನು ಮನಃಪೂರ್ವಕವಾಗಿ ನಡಿಸಿರಿ. ಮನುಷ್ಯರಿಗೋಸ್ಕರವಲ್ಲ, ಕರ್ತನಿಗೋಸ್ಕರ ಸೇವೆ ಮಾಡುತ್ತೇವೆಂದು ಚಿತ್ತಪೂರ್ವಕವಾಗಿ ಸೇವೆ ಮಾಡಿರಿ. ಯಾಕೆಂದರೆ ಒಬ್ಬನು ದಾಸನಾಗಲಿ, ಸ್ವತಂತ್ರನಾಗಲಿ ತಾನು ಯಾವ ಸತ್ಕಾರ್ಯವನ್ನು ಮಾಡುತ್ತಾನೋ ಅದರ ಪ್ರತಿಫಲವನ್ನು ಕರ್ತನಿಂದ ಹೊಂದುವನೆಂಬುದನ್ನು ನೀವು ತಿಳಿದವರಾಗಿಯೇ ಇದ್ದೀರಿ. ಯಜಮಾನರೇ ನಿಮ್ಮ ಕೈ ಕೆಳಗಿರುವ ದಾಸರ ವಿಷಯದಲ್ಲಿ ಅದೇ ರೀತಿಯಾಗಿ ನಡೆಯಿರಿ. ಪರಲೋಕದಲ್ಲಿ ನಿಮಗೂ, ಅವರಿಗೂ ಯಜಮಾನನಾಗಿರುವಾತನು ಇದ್ದಾನೆಂತಲೂ ಆತನಲ್ಲಿ ಪಕ್ಷಪಾತವಿಲ್ಲವೆಂತಲೂ ತಿಳಿದು ನಿಮ್ಮ ದಾಸರನ್ನು ಬೆದರಿಸುವ ಪದ್ಧತಿಯನ್ನು ಬಿಟ್ಟುಬಿಡಿರಿ.**

ಕೊಲೊಸ್ಸೆಯವರಿಗೆ 3:22–25

**ದಾಸತ್ವದಲ್ಲಿರುವವರೇ, ಈ ಲೋಕದಲ್ಲಿನ ನಿಮ್ಮ ಯಜಮಾನರಿಗೆ ಎಲ್ಲಾ ವಿಷಯಗಳಲ್ಲಿ ವಿಧೇಯರಾಗಿರಿ; ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ನಿಮ್ಮ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆಮಾಡದೆ ಕರ್ತನಿಗೆ ಭಯಪಡುವವರಾಗಿ ಸರಳಮನಸ್ಸಿನಿಂದ ಕೆಲಸಮಾಡಿರಿ. ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ; ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ, ನೀವು ಕರ್ತನಾದ ಕ್ರಿಸ್ತನಿಗೇ ದಾಸರಾಗಿದ್ದೀರಿ. ಅನ್ಯಾಯಮಾಡುವವನು ತಾನು ಮಾಡಿದ ಅನ್ಯಾಯಕ್ಕೆ ತಕ್ಕ ಪ್ರತಿಫಲವನ್ನು ಹೊಂದುವನಷ್ಟೆ; ಪಕ್ಷಪಾತವಿರುವದಿಲ್ಲ.**

## 8.6. ನಿಮ್ಮ ಸ್ವತಂತ್ರತೆಯನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿರಿ

ರೋಮಾಪುರದವರಿಗೆ 14:1–9

**ನಂಬಿಕೆಯಲ್ಲಿ ದೃಢವಿಲ್ಲದವರನ್ನೂ ಸೇರಿಸಿಕೊಳ್ಳಿರಿ, ಆದರೆ ಸಂದೇಹಾಸ್ಪದವಾದ ಕಾರ್ಯಗಳನ್ನು ಅವರ ಮುಂದೆ ಚರ್ಚಿಸಬೇಡಿರಿ. ಒಬ್ಬನು ಯಾವದನ್ನಾದರೂ ತಿನ್ನಬಹುದೆಂದು ನಂಬುತ್ತಾನೆ; ನಂಬಿಕೆಯಲ್ಲಿ ದೃಢವಿಲ್ಲದವನು ಕಾಯಿಪಲ್ಯಗಳನ್ನು ಮಾತ್ರ ತಿನ್ನುತ್ತಾನೆ. ತಿನ್ನದವನು ತಿನ್ನುವವನನ್ನು ಹೀನೈಸಬಾರದು; ತಿನ್ನದವನು ತಿನ್ನುವವನನ್ನು ದೋಷಿಯೆಂದು ಎಣಿಸಬಾರದು. ದೇವರು ಇಬ್ಬರನ್ನೂ ಸೇರಿಸಿಕೊಂಡಿದ್ದಾನಲ್ಲಾ. ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪುಮಾಡುವದಕ್ಕೆ**

ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ ಸೇರಿದ್ದು. ಅವನು ನಿರ್ದೋಷಿಯಾಗಿ ನಿಲ್ಲಿಸಲ್ಪಡುವನು; ಅವನನ್ನು ನಿಲ್ಲಿಸುವದಕ್ಕೆ ಕರ್ತನು ಶಕ್ತನಾಗಿದ್ದಾನೆ. ಒಬ್ಬನು ಒಂದು ದಿನಕ್ಕಿಂತ ಮತ್ತೊಂದು ದಿನವನ್ನು ವಿಶೇಷವೆಂದೆಣಿಸುತ್ತಾನೆ; ಮತ್ತೊಬ್ಬನು ಎಲ್ಲಾ ದಿವಸಗಳನ್ನೂ ವಿಶೇಷವೆಂದೆಣಿಸುತ್ತಾನೆ; ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು. ದಿನವನ್ನು ಗಣ್ಯಮಾಡುವವನು ಕರ್ತನಿಗಾಗಿ ಅದನ್ನು ಗಣ್ಯಮಾಡುತ್ತಾನೆ. ತಿನ್ನುವವನು ಕರ್ತನಿಗಾಗಿ ತಿನ್ನುತ್ತಾನೆ; ಅವನು ದೇವಸ್ತೋತ್ರ ಮಾಡುತ್ತಾನಲ್ಲಾ. ತಿನ್ನದವನು ಸಹ ಕರ್ತನಿಗಾಗಿಯೇ ತಿನ್ನದೆ ದೇವಸ್ತೋತ್ರ ಮಾಡುತ್ತಾನೆ. ನಮ್ಮಲ್ಲಿ ಒಬ್ಬನಾದರೂ ತನಗಾಗಿ ಬದುಕುವದೂ ಇಲ್ಲ, ತನಗಾಗಿ ಸಾಯುವದೂ ಇಲ್ಲ. ನಾವು ಬದುಕಿದರೆ ಕರ್ತನಿಗಾಗಿ ಬದುಕುತ್ತೇವೆ; ಸತ್ತರೆ ಕರ್ತನಿಗಾಗಿ ಸಾಯುತ್ತೇವೆ; ಬದುಕಿದರೂ ಸತ್ತರೂ ನಾವು ಕರ್ತನವರೇ. ಯಾಕೆಂದರೆ ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರಬೇಕೆಂತಲೇ ಕ್ರಿಸ್ತನು ಸತ್ತು ಜೀವಿತನಾದನು.

1 ಕೊರಿಂಥದವರಿಗೆ 8:1–13

ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳ ವಿಷಯದಲ್ಲಿ ಈಗ ನೋಡೋಣ. ನಮ್ಮೆಲ್ಲರಿಗೆ ಜ್ಞಾನವುಂಟೆಂದು ಬಲ್ಲೆವು. ಜ್ಞಾನವು ಉಬ್ಬಿಸುತ್ತದೆ, ಪ್ರೀತಿಯು ಭಕ್ತಿವೃದ್ಧಿಯನ್ನುಂಟುಮಾಡುತ್ತದೆ ಇಂಥಿಂಥದನ್ನು ತಿಳುಕೊಂಡಿದ್ದೇನೆಂದು ನೆನೆಸಿದವನು ತಾನು ತಿಳಿಯಬೇಕಾದ ರೀತಿಯಿಂದ ಇನ್ನೂ ತಿಳುಕೊಳ್ಳಲಿಲ್ಲ. ಆದರೆ ಯಾವನು ದೇವರನ್ನು ಪ್ರೀತಿಸುತ್ತಾನೋ ಅವನನ್ನೇ ದೇವರು ತಿಳುಕೊಳ್ಳುತ್ತಾನೆ. ವಿಗ್ರಹಗಳಿಗೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನುವದರ ವಿಷಯದಲ್ಲಿ ನಾನು ಹೇಳುವದೇನಂದರೆ– ಜಗತ್ತಿನಲ್ಲಿ ವಿಗ್ರಹವು ಏನೂ ಅಲ್ಲವೆಂದೂ ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದೂ ಬಲ್ಲೆವು. ಅನೇಕರನ್ನು ದೇವರುಗಳೆಂದೂ ಕರ್ತರೆಂದೂ ಪೂಜಿಸುವದುಂಟು ನಿಜವೇ; ಆಕಾಶದಲ್ಲಿಯಾಗಲಿ ಭೂಮಿಯ ಮೇಲೆಯಾಗಲಿ ದೇವರುಗಳೆನಿಸಿಕೊಳ್ಳುವವರಿದ್ದಾರೆ, ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ ಉಂಟಾದೆವು. ಮತ್ತು ನಮಗೆ ಒಬ್ಬನೇ ಕರ್ತ; ಆತನು ಯೇಸು ಕ್ರಿಸ್ತನೇ; ಆತನ ಮುಖಾಂತರ ಸಮಸ್ತವೂ ಉಂಟಾಯಿತು, ನಾವೂ ಆತನ ಮುಖಾಂತರ ಉಂಟಾದೆವು. ಆದರೆ ಈ ಜ್ಞಾನವು ಎಲ್ಲರಲ್ಲಿಯೂ ಇಲ್ಲ. ಕೆಲವರು ಈ ವರೆಗೂ ವಿಗ್ರಹದ ಬಳಿಗೆ ಹೋಗುವ ರೂಢಿಯಲ್ಲಿದ್ದದರಿಂದ ತಾವು ತಿನ್ನುವ ಪದಾರ್ಥಗಳನ್ನು ವಿಗ್ರಹಕ್ಕೆ ನೈವೇದ್ಯಮಾಡಿದ್ದೆಂದು ತಿನ್ನುತ್ತಾರೆ; ಹೀಗೆ ಅವರ ಮನಸ್ಸು ಬಲಹೀನವಾಗಿದ್ದು ಕಲೆಯನ್ನು ಹೊಂದುತ್ತದೆ. ಆದರೆ ಆಹಾರವು ನಮ್ಮನ್ನು ದೇವರ ಸನ್ನಿಧಿಗೆ ಸೇರಿಸಲಾಗದು. ತಿನ್ನದಿದ್ದರೆ ನಮಗೆ ಕಡಿಮೆಯಿಲ್ಲ, ತಿಂದರೆ ನಮಗೆ ಹೆಚ್ಚಿಲ್ಲ. ಆದರೂ ಈ ನಿಮ್ಮ ಸ್ವಾತಂತ್ರ್ಯವು ನಂಬಿಕೆಯಲ್ಲಿ ಬಲವಿಲ್ಲದವರಿಗೆ ಒಂದು ವೇಳೆ ವಿಘ್ನವಾದೀತು, ಎಚ್ಚರಿಕೆಯಾಗಿರಿ. ಜ್ಞಾನಿಯಾದ ನೀನು ವಿಗ್ರಹಾಲಯದಲ್ಲಿ ಊಟಕ್ಕೆ ಕೂತಿರುವಾಗ ನಿರ್ಬಲವಾದ ಮನಸ್ಸುಳ್ಳ ಸಹೋದರನು ಕಂಡರೆ ಅವನೂ ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನುವುದಕ್ಕೆ ಧೈರ್ಯತಂದುಕೊಂಡಾನಲ್ಲವೇ. ಹೀಗೆ ಆ ಬಲಹೀನನು ನಿನ್ನ ಜ್ಞಾನದಿಂದ ನಾಶವಾಗುತ್ತಾನೆ. ಅವನು ಸಹೋದರನಲ್ಲವೇ. ಅವನಿಗಾಗಿಯೂ ಕ್ರಿಸ್ತನು ತನ್ನ ಪ್ರಾಣ

**ಕೊಟ್ಟನಲ್ಲವೇ. ಹೀಗಿರಲಾಗಿ ಸಹೋದರರಿಗೆ ಪಾಪಮಾಡಿ ಅವರ ನಿರ್ಬಲವಾದ ಮನಸ್ಸನ್ನು ನೋಯಿಸಿ ಕ್ರಿಸ್ತನಿಗೆ ಪಾಪಮಾಡುವವರಾಗುತ್ತೀರಿ. ಆದದರಿಂದ ಭೋಜನಪದಾರ್ಥದಿಂದ ನನ್ನ ಸಹೋದರನಿಗೆ ವಿಘ್ನವಾಗುವದಾದರೆ ನಾನು ಎಂದಿಗೂ ಮಾಂಸವನ್ನು ತಿನ್ನುವದಿಲ್ಲ; ನಾನು ನನ್ನ ಸಹೋದರನಿಗೆ ವಿಘ್ನವನ್ನುಂಟುಮಾಡಬಾರದಲ್ಲಾ.**

1 ಕೊರಿಂಥದವರಿಗೆ 9:19–23

**ನಾನು ಎಲ್ಲಾ ವಿಷಯದಲ್ಲಿ ಸ್ವತಂತ್ರನಾಗಿದ್ದರೂ ಹೆಚ್ಚು ಜನರನ್ನು ಸಂಪಾದಿಸಿಕೊಳ್ಳಬೇಕೆಂದು ನನ್ನನ್ನು ಎಲ್ಲರಿಗೂ ಅಧೀನಮಾಡಿದೆನು. ಯೆಹೂದ್ಯರನ್ನು ಸಂಪಾದಿಸಿಕೊಳ್ಳುವದಕ್ಕೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ನಿಯಮಗಳಿಗೆ ಅಧೀನನಲ್ಲದವನಾದರೂ ನಿಯಮಗಳಿಗೆ ಅಧೀನರಾದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಮಯಗಳಿಗೆ ಅಧೀನಂತಾದೆನು. ನಾನು ದೇವರ ನೇಮವಿಲ್ಲದವನಲ್ಲ, ಕ್ರಿಸ್ತನ ನಿಯಮಕ್ಕೊಳಗಾದವನೇ; ಆದರೂ ನಿಯಮವಿಲ್ಲದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮವಿಲ್ಲದವನಂತಾದೆನು. ಬಲವಿಲ್ಲದವರನ್ನು ಸಂಪಾದಿಸುವದಕ್ಕೆ ಅವರಿಗೆ ಬಲವಿಲ್ಲದವನಾದೆನು. ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿದ್ದೇನೆ. ನಾನು ಇತರರ ಸಂಗಡ ಸುವಾರ್ತೆಯ ಫಲದಲ್ಲಿ ಪಾಲುಗಾರನಾಗಬೇಕೆಂದು ಇದೆಲ್ಲವನ್ನು ಸುವಾರ್ತೆಗೋಸ್ಕರವೇ ಮಾಡುತ್ತೇನೆ.**

# ಅಧ್ಯಾಯ 9

# ಆತನ ದೇಹದ ಅಂಗಗಳು

## 9.1. ಆತನ ದೇಹದಲ್ಲಿ ಒಂದೇ ಆಗಿದ್ದೇವೆ

ರೋಮಾಪುರದವರಿಗೆ 12:4–8

**ಯಾಕಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವದಿಲ್ಲವೋ ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ. ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. ಅದು ಸಭಾಸೇವೆಯ ವರವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ. ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿಹೇಳುವವನು ಬುದ್ಧಿಹೇಳುವದರಲ್ಲಿಯೂ ನಿರತನಾಗಿರಲಿ. ದಾನಕೊಡುವವನು ಯಥಾರ್ಥಮನಸ್ಸಿನಿಂದ ಕೊಡಲಿ. ಹಿರೀತನ ನಡಿಸುವವನು ಆಸಕ್ತಿಯಿಂದ ನಡಿಸಲಿ. ಕಷ್ಟದಲ್ಲಿರುವವರಿಗೆ ಉಪಕಾಮಾಡುವವನು ಸಂತೋಷವಾಗಿ ಮಾಡಿಲಿ.**

ನಾವು ಕ್ರಿಸ್ತನಲ್ಲಿರುವ ಕಾರಣ ಇದು ನಮ್ಮನ್ನು ಕ್ರಿಸ್ತನೊಂದಿಗಿರುವ ಎಲ್ಲರೊಂದಿಗೆ ನಮ್ಮನ್ನು ಒಂದಾಗಿ ಮಾಡಿದೆ.

ರೋಮಾಪುರದವರಿಗೆ 12:5

**ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ.**

## 9.2. ಯಾವುದೇ ಭೇದ–ಭಾವವಿಲ್ಲ

ಗಲಾತ್ಯದವರಿಗೆ 3:27,28

**ಹೇಗೆಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ.**

ಕೊಲೊಸ್ಸೆಯವರಿಗೆ 3:11

**ಇದನ್ನು ಧರಿಸಿಕೊಂಡಿರುವದರಲ್ಲಿ ಗ್ರೀಕನು ಯೆಹೂದ್ಯನು ಎಂಬ ಭೇದವಿಲ್ಲ; ಸುನ್ನತಿಮಾಡಿಸಿಕೊಂಡವರು ಸುನ್ನತಿಮಾಡಿಸಿಕೊಳ್ಳದವರು ಎಂಬ ಭೇದವಿಲ್ಲ; ಮ್ಲೇಚ್ಛ ಹೂಣ ಎಂಬ ಹೆಸರುಗಳಿಲ್ಲ; ಆಳು ಒಡೆಯ ಎಂಬ ಭೇದವಿಲ್ಲ. ಆದರೆ ಕ್ರಿಸ್ತನೇ ಸಮಸ್ತರಲ್ಲಿಯೂ ಸಮಸ್ತವೂ ಆಗಿರುವನು.**

ಕ್ರಿಸ್ತನಲ್ಲಿರುವ ನಮ್ಮ ಗುರುತು, ನಮ್ಮ ಜನಾಂಗೀಯ, ಸಾಮಾಜಿಕ, ಅಥವಾ ಲಿಂಗದ ಆಧಾರದಲ್ಲಿ ಗುರ್ತಿಸುವಿಕೆಯನ್ನು ರದ್ದುಗೊಳಿಸುತ್ತದೆ. ಜನಾಂಗ, ಲಿಂಗಬೇದ, ಮತ್ತು ಸಾಮಾಜಿಕ ನಿಲುವುಗಳು ನಮ್ಮನ್ನು ವಿಭಾಗಿಸಲು ಸಾಧ್ಯವಿಲ್ಲ.

ಎಫೆಸದವರಿಗೆ 1:10

**ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆಮಾಡಿಕೊಂಡಿದ್ದನು. ಅದೇನಂದರೆ ಭೂಪರಲೋಕಗಳಲ್ಲಿ ಇರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ.**

ಎಫೆಸದವರಿಗೆ 3:6

**ಅದು ಯಾವದಂದರೆ, ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ.**

## 9.3. ಪರಸ್ಪರಾವಲಂಬಿಗಳು

1 ಕೊರಿಂಥದವರಿಗೆ 12:12–27

**ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ, ಹೇಗೆ ದೇಹದ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವದೋ, ಹಾಗೆಯೇ ಕ್ರಿಸ್ತನು. ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು. ದೇಹವು ಒಂದೇ ಅಂಗವಲ್ಲ, ಅನೇಕ ಅಂಗಗಳುಳ್ಳದ್ದಾಗಿದೆ. ಕಾಲು–ನಾನು ಕೈಯಲ್ಲದ ಕಾರಣ ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ ಸೇರದೆ ಇರುವದೋ? ಕಿವಿ–ನಾನು ಕಣ್ಣಲ್ಲದ ಕಾರಣ ನಾನು ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ ಸೇರದೆ ಇರುವದೋ? ದೇಹವೆಲ್ಲಾ ಕಣ್ಣಾದರೆ ಕಿವಿಯೆಲ್ಲಿ? ಅದೆಲ್ಲಾ ಕಿವಿಯಾದರೆ ಮೂಗೆಲ್ಲಿ? ಅದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ. ಅವೆಲ್ಲವು ಒಂದೇ ಅಂಗವಾಗಿದ್ದರೆ ದೇಹವೆಲ್ಲಿರುವದು? ಅದರೆ ಅಂಗಗಳೇನೋ ಅನೇಕ, ದೇಹವು ಒಂದೇ. ಕಣ್ಣು ಕೈಗೆ –ನೀನು ನನಗೆ ಅವಶ್ಯವಿಲ್ಲವೆಂದೂ, ತಲೆಯು ಕಾಲುಗಳಿಗೆ– ನೀವು ನನಗೆ ಅವಶ್ಯವಿಲ್ಲವೆಂದೂ ಹೇಳುವದಕ್ಕಾಗುವದಿಲ್ಲ. ದೇಹದಲ್ಲಿ ಅಲ್ಪಬಲವುಳ್ಳವುಗಳಾಗಿ ಕಾಣುವ ಅಂಗಗಳನ್ನು ಅತ್ಯವಶ್ಯವೆಂದು ತಿಳಿಯಬೇಕಲ್ಲವೋ? ಮತ್ತು ನಾವು ದೇಹದಲ್ಲಿ ಅಲ್ಪಮಾನವುಳ್ಳವುಗಳೆಂದೆಣಿಸುವ ಭಾಗಗಳಿಗೆ ಉಡಿಗೆಯಿಂದ ಹೆಚ್ಚಾದ ಮಾನವನ್ನು ಕೊಡುವದುಂಟಲ್ಲಾ; ಹೀಗೆ ಅಂದವಿಲ್ಲದ ಅಂಗಗಳಿಗೆ ಹೆಚ್ಚಾದ ಅಂದವುಂಟಾಗುತ್ತದೆ. ಅಂದವುಳ್ಳ ಅಂಗಗಳಿಗೆ ಏನೂ ಅವಶ್ಯವಿಲ್ಲ. ದೇಹದಲ್ಲಿ ಭೇದವೇನೂ ಇರದೆ ಅಂಗಗಳು ಒಂದಕ್ಕೊಂದು ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನ್ನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದ್ದಾನೆ.**

**ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ; ಒಂದು ಅಂಗಕ್ಕೆ ಮರ್ಯಾದೆ ಬಂದರೆ ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ, ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ.**

ಕ್ರಿಸ್ತನಲ್ಲಿರುವ ನಮ್ಮ ಅನ್ಯೋನ್ಯತೆಯು ಸ್ವಾಭಾವಿಕವಾದ ನಮ್ಮ ವ್ಯಕ್ತಿತ್ವವನ್ನು ಆಕ್ರಮಿಸುತ್ತದೆ. ನಾವು ಒಬ್ಬರಮೇಲೊಬ್ಬರು ಆತುಕೊಂಡಿದ್ದೇವೆ. ಪ್ರತಿಯೊಬ್ಬರಿಗೂ ಕಾರ್ಯನಿರ್ವಯಿಸಲು ಉದ್ಯೋಗವಿದೆ. ಪ್ರತಿ ಅಂಗವನ್ನು ನಾವು ಸನ್ಮಾನಿಸಿ ಗೌರವಪಡಿಸಬೇಕು. ಯಾರು ಗೌರವವನ್ನು ಅಪೇಕ್ಷಿಸುವುದಿಲ್ಲಯೋ ಅವರಿಗಾಗಿ ದೇವರು ಮಹತ್ತರವಾದ ಗೌರವವನ್ನು ಇಟ್ಟಿದ್ದಾನೆ.

1 ಪೇತ್ರನು 5:14
**ಪ್ರೀತಿಯಿಂದ ಮುದ್ದಿಟ್ಟು ಒಬ್ಬರನೋಬ್ಬರು ವಂದಿಸಿರಿ. ಕ್ರಿಸ್ತನಲ್ಲಿರುವ ನಿಮ್ಮೆಲ್ಲರಿಗೆ ಶಾಂತಿಯಿರಲಿ.**

ಕ್ರಿಸ್ತ ಯೇಸುವಿನಲ್ಲಿ ಇರುವವರನ್ನು ನಾವು ಗುರುತಿಸಬಹುದು.

## 9.4. ನಾವು ಒಟ್ಟಾಗಿ ಕ್ರಿಸ್ತನನ್ನು ಪ್ರತಿಬಿಂಬಿಸುತ್ತವೆ

ಎಫೆಸದವರಿಗೆ 1:22,23
**ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ.**

ನಾವು ಒಟ್ಟಾಗಿ ಕ್ರಿಸ್ತನನ್ನು ಲೋಕಕ್ಕೆ ಪ್ರತಿಬಿಂಬಿಸುವವರಾಗಿದ್ದೇವೆ. ನಾವು ಈ ಭೂಮಿಯ ಮೇಲೆ ಆತನ ದೇಹವಾಗಿದ್ದೇವೆ.

## 9.5. ದೇವರು ವಾಸಿಸುವ ಸ್ಥಳವಾಗಿ ನಾವು ಒಟ್ಟಾಗಿ ಕಟ್ಟಲ್ಪಟ್ಟಿದ್ದೇವೆ

ಎಫೆಸದವರಿಗೆ 2:21,22
**ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು. ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗಿತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗಿರುತ್ತದೆ. ಆತನಲ್ಲಿ ನೀವು ಸಹ ಪವಿತ್ರಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವುದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ.**

1 ಪೇತ್ರನು 2:5
**ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪವಿತ್ರ ಯಾಜಕವರ್ಗದವರಾಗಿದ್ದೀರಿ.**

ನಾವು ಈ ಲೋಕದಲ್ಲಿ ದೇವರು ವಾಸಿಸುವ ಮನೆಯಾಗಿದ್ದೇವೆ. ಆದಕಾರಣ ನಾವು ಆತ್ಮಿಕವಾದ ಸ್ತುತಿ ಯಜ್ಞಗಳನ್ನು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾಗುವಂತೆ ಅರ್ಪಿಸಬೇಕು.

## 9.6. ಸ್ಥಳೀಯ ಸಭೆಗಳು ಕ್ರಿಸ್ತನಲ್ಲಿ ಇವೆ

ಗಲಾತ್ಯದವರಿಗೆ 1:22
**ಆದರೆ ಕ್ರಿಸ್ತನಲ್ಲಿರುವ ಯೂದಾಯದ ಸಭೆಗಳಿಗೆ ನನ್ನ ಗುರುತಿರಲಿಲ್ಲ.**

1 ಥೆಸಲೋನಿಕದವರಿಗೆ 2:14
**ಹೌದು, ಸಹೋದರರೇ, ನೀವು ಯೂದಾಯದಲ್ಲಿ ಕ್ರಿಸ್ತ ಯೇಸುವಿನಲ್ಲಿರುವ ದೇವರ ಸಭೆಗಳನ್ನು ಅನುಸರಿಸುವವರಾದಿರಿ. ಅವರು ಯೆಹೂದ್ಯರಿಂದ ಅನುಭವಿಸಿದಂಥ ಕಷ್ಟಗಳನ್ನು ನೀವೂ ನಿಮ್ಮ ಸ್ವದೇಶದವರಿಂದ ಅನುಭವಿಸಿದಿರಿ.**

# ಅಧ್ಯಾಯ 10

# ಆತನಲ್ಲಿರುವ ನಮ್ಮ ಬಾಧ್ಯತೆ

ಎಫೆಸದವರಿಗೆ 1:11,12

**ಕ್ರಿಸ್ತನಲ್ಲಿಯೇ ಸಮಸ್ತವು ಒಂದಾಗುವದು. ಇದಲ್ಲದೆ ಆತನಲ್ಲಿ ನಾವು ದೇವರ ಸ್ವಕೀಯ ಪ್ರಜೆಯಾದೆವು. ಬರಬೇಕಾದ ಕ್ರಿಸ್ತನನ್ನು ಎದುರುನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿಪಡಿಸಬೇಕೆಂದು ಸಮಸ್ತಕಾರ್ಯಗಳನ್ನು ತನ್ನ ಇಷ್ಟದಂತೆ ನಡಿಸುವ ದೇವರು ತನ್ನ ಸಂಕಲ್ಪದ ಮೇರೆಗೆ ನಮ್ಮನ್ನು ಅದಿಯಲ್ಲಿಯೇ ಆರಿಸಿಕೊಂಡನು.**

ಬಾಧ್ಯತೆ= ಅನುವಂಶಿಕವಾಗಿರುವ ಸ್ವಾಸ್ಥ್ಯವನ್ನು ಕೊಡುವುದು.

ನಮ್ಮ ಮೂಲಕವಾಗಿ ಆತನಿಗೆ ಸ್ತುತಿ-ಆರಾಧನೆ ಸಲ್ಲಬೇಕೆಂದು ದೇವರು ಈ ಬಾಧ್ಯತೆಯನ್ನು ನಮಗೆ ಕೊಟ್ಟಿದ್ದಾನೆ.

ಕ್ರಿಸ್ತನಲ್ಲಿ ನಮಗೆ ಕೊಡಲ್ಪಟ್ಟ ಆತನ ಕೃಪೆ ಮತ್ತು ಜ್ಞಾನದ ಸಮೃದ್ಧಿಯನ್ನು ಮತ್ತು ದೇವರ ಒಳ್ಳೆಯ ಕಾರ್ಯಗಳನ್ನು "ನಮ್ಮ ಬಾಧ್ಯತೆಯ" ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಒಂದು ಪಟ್ಟಿಯಾಗಿ ನೋಡಬಹುದು.

## 10.1. ದೇವರ ಮಕ್ಕಳು

ಗಲಾತ್ಯದವರಿಗೆ 3:26

**ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ.**

## 10.2. ಜೀವವಾಗ್ದಾನದ ಬಾಧ್ಯತೆ

2 ತಿಮೊಥೆಯನಿಗೆ 1:1

**ಕ್ರಿಸ್ತ ಯೇಸುವಿನಲ್ಲಿರುವ ಜೀವವಾಗ್ದಾನವನ್ನು ತಿಳಿಯಪಡಿಸುವದಕ್ಕೋಸ್ಕರ ದೇವರ ಚಿತ್ತಾನುಸಾರವಾಗಿ ಕ್ರಿಸ್ತ ಯೇಸುವಿನ ಅಪೊಸ್ತಲನಾದ ಪೌಲನು ತನ್ನ ಪ್ರಿಯ ಕುಮಾರನಾದ ತಿಮೊಥೆಯನಿಗೆ ಬರೆಯುವದೇನಂದರೆ.**

1 ಯೋಹಾನನು 5:20

**ದೇವರ ಮಗನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬದು ನಮಗೆ ಗೊತ್ತದೆ. ಮತ್ತು ನಾವು ದೇವರ ಮಗನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ. ಆತನು ಸತ್ಯದೇವರೂ ನಿತ್ಯಜೀವವೂ ಆಗಿದ್ದಾನೆ.**

ಆತನನ್ನು ತಿಳುಕೊಳ್ಳುವುದು ಮತ್ತು ಆತನಲ್ಲಿರುವುದು ನಿತ್ಯಜೀವವಾಗಿದೆ.

## 10.3. ನಾವು ಕ್ರಿಸ್ತನೊಂದಿಗೆ ಬಾಧ್ಯಸ್ತರಾಗಿದ್ದೇವೆ

ರೋಮಾಪುರದವರಿಗೆ 8:17

**ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು. ಹೇಗಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು.**

ದೇವರ ಬಾಧ್ಯಸ್ತನು ಅಂದರೆ ದೇವರು ತನ್ನ ಜನರಿಗೆ ಕೊಡುವ ಸ್ವಾಸ್ಥ್ಯದಲ್ಲಿ ಪಾಲುಗಾರರಾಗುವುದು.

ನಾವು ಕ್ರಿಸ್ತನಲ್ಲಿದ್ದೇವೆ ಆದಕಾರಣ ನಾವು ಅತನೊಂದಿಗೆ ಅತನ ಮಹಿಮೆಯಲ್ಲಿಯೂ ಮತ್ತು ಸ್ವಾಸ್ಥ್ಯದಲ್ಲಿಯೂ ಪಾಲುಗಾರರಾಗಿದ್ದೇವೆ.

ಕೊಲೊಸ್ಸೆಯವರಿಗೆ 1:12

**ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ ತಂದೆಗೆ ಕೃತಜ್ಞತಾಸ್ತುತಿ ಮಾಡುವವರಾಗಿಬೇಕೆಂತಲೂ ದೇವರನ್ನು ಬೇಡಿಕೊಳ್ಳುತ್ತೇವೆ.**

ಅಪೊಸ್ತಲರ ಕೃತ್ಯಗಳು 20:32

**ನಾನೀಗ ನಿಮ್ಮನ್ನು ಕರ್ತನಿಗೂ ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಡುತ್ತೇನೆ. ಆತನು ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟುಮಾಡುವದಕ್ಕೂ ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನ್ನು ಅನುಗ್ರಹಿಸುವದಕ್ಕೂ ಶಕ್ತನಾಗಿದ್ದಾನೆ.**

## 10.4. ಕ್ರಿಸ್ತನಲ್ಲಿರುವ ದೇವರ ಪ್ರೀತಿಯಲ್ಲಿ ಬಾಧ್ಯಸ್ತರಾಗಿದ್ದೇವೆ

ರೋಮಾಪುರದವರಿಗೆ 8:35–39

**ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ? ದೇವರೇ, ನಾವು ನಿನ್ನ ನಿಮಿತ್ತ ದಿನವೆಲ್ಲಾ ಕೊಲೆಗೆ ಗುರಿಯಾಗಿದ್ದೇವೆ; ಜನರು ನಮ್ಮನ್ನು ಕೊಯ್ಗುರಿಗಳಂತೆ ಎಣಿಸಿದರು ಎಂಬದಾಗಿ ಬರೆದಿರುವಂತೆ ಆಗುತ್ತದಲ್ಲಾ. ಅದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ. ಹೇಗಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು.**

ಯೋಹಾನ 17:23

**ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣ ಸಿದ್ಧಿಗೆ ಬರುವದರಿಂದ ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದೂ ನೀನು ನನ್ನನ್ನೂ ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದೂ ಲೋಕಕ್ಕೆ ತಿಳಿದುಬರುವದು.**

ತಂದೆಯು ಕ್ರಿಸ್ತನನ್ನು ಪ್ರೀತಿಸುವಂತೆ ನಮ್ಮನ್ನು ಸಹ ಅದೇ ರೀತಿಯಲ್ಲಿ ಪ್ರೀತಿಸುವವನಾಗಿದ್ದಾನೆ. ಇದು ಆಶ್ಚರ್ಯಕರವಾದ ಒಂದು ಸತ್ಯವುಳ್ಳ ಸಂಗತಿಯಾಗಿದೆ.

## 10.5. ಪವಿತ್ರಾತ್ಮನೊಂದಿಗೆ ಮುದ್ರೆ ಹೊಂದಿದ್ದೇವೆ

ಎಫೆಸದವರಿಗೆ 1:13,14

**ನಿಮ್ಮ ರಕ್ಷಣೆಯು ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವದೆಂಬದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ. ಆ ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನು ಉಂಟುಮಾಡುವದು.**

"ಮುದ್ರೆ" – ಗ್ರೀಕ್‌ನಲ್ಲಿ ಸ್ಪೇರಾಗಿಜೊ – ಅಂದರೆ ಭದ್ರತೆ ಅಥವಾ ಸುರಕ್ಷತೆಗಾಗಿ ಮುದ್ರೆ (ಒಂದು ಮುದ್ರಿಕೆ ಅಥವಾ ಖಾಸಗೀ ಗುರುತು)

ಖಾತರಿ – ಗ್ರೀಕ್‌ನಲ್ಲಿ ಅರ್ರಾಬೊ – ಒಂದು ಪ್ರತಿಜ್ಞೆ, ಇದು ಒಂದು ಖರೀದಿ ಹಣದ ಭಾಗ ಅಥವಾ ಶ್ರದ್ಧೆಯಿಂದ ಉಳಿದ ಭದ್ರತೆಗಾಗಿ ಮುಂಚಿತವಾಗಿ ನೀಡಿದ ಆಸ್ತಿಯ ಭಾಗವಾಗಿದೆ.

## 10.6. ಕ್ರಿಸ್ತನಲ್ಲಿ ಸಂರಕ್ಷಿಸಲ್ಪಟ್ಟಿದ್ದೇವೆ

ಯೂದನು 1:1

**ಯೇಸು ಕ್ರಿಸ್ತನ ದಾಸನೂ ಯಾಕೋಬನ ತಮ್ಮನೂ ಆಗಿರುವ ಯೂದನು ತಂದೆಯಾದ ದೇವರಲ್ಲಿ ಪ್ರಿಯರಾದವರೂ ಯೇಸು ಕ್ರಿಸ್ತನಿಗಾಗಿ ಕಾಯಲ್ಪಟ್ಟವರೂ ಆಗಿರುವವರಿಗೆ ಬರೆಯುವದೇನಂದರೆ–**

ಕ್ರಿಸ್ತ ಯೇಸುವಿನಲ್ಲಿ ನಾವು ಕರೆಯಲ್ಪಟ್ಟಿದ್ದೇವೆ ಮತ್ತು ಸಂರಕ್ಷಿಸಲ್ಪಟ್ಟಿದ್ದೇವೆ

ಸಂರಕ್ಷಣೆ ಅಂದರೆ ಜಾಗರೂಕತೆಯಿಂದ, ಜೋಪಾನವಾಗಿ, ಎಚ್ಚರಿಕೆಯುಳ್ಳವರಾಗಿ ಇಡುವುದು ಎಚ್ಚರಿಕೆಯಿಂದ ನೋಡಿಕೊ, ಅಲಂಕಾರಿಕವಾಗಿ ಇರಿಸು, ಒಬ್ಬನು ಇರುವಂತರಲ್ಲೆ ಇರಿಸುವುದು.

## 10.7. ನಾವು ಅತನಲ್ಲಿ ಸ್ಥಿರವಾಗಿ ನೆಲೆಗೊಂಡಿದ್ದೇವೆ

2 ಕೊರಿಂಥದವರಿಗೆ 1:21

**ನಮ್ಮನ್ನು ಅಭಿಷೇಕಿಸಿ ಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಿಸಿ ನಮ್ಮನ್ನು ನಿಮ್ಮೊಂದಿಗೆ ಸ್ಥಿರಪಡಿಸುವವನು ದೇವರೇ;**

ನೆಲೆಗೊಳ್ಳುವುದು ಅಂದರೆ ಸ್ಥಿರವಾಗಿ, ಖಚಿತವಾಗಿ.

## 10.8. ದೇವರ ನಿತ್ಯತ್ವದ ಉದ್ದೇಶದಲ್ಲಿ ಪಾಲುಗಾರರಾಗಿದ್ದೇವೆ

ಎಫೆಸದವರಿಗೆ 3:11

**ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬದನ್ನು ಉದ್ದೇಶಿಸಿದ್ದನು.**

2 ತಿಮೊಥೆಯನಿಗೆ 1:9

**ಆತನು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು.**

ಫಿಲಿಪ್ಪಿಯವರಿಗೆ 3:14

**ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ.**

## 10.9. ದೇವರ ಜ್ಞಾನವಾಗಿದ್ದೇವೆ

1 ಕೊರಿಂಥದವರಿಗೆ 1:30

**ನೀವು ಕ್ರಿಸ್ತ ಯೇಸುವಿನಲ್ಲಿರುವದು ಆತನಿಂದಲೇ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು.**

ಕೊಲೊಸ್ಸೆಯವರಿಗೆ 2:3

**ಹೇಗೆಂದರೆ ನೀವೆಲ್ಲರು ಪ್ರೀತಿಯಿಂದ ಹೊಂದಿಕೆಯಾಗಿದ್ದು ಬುದ್ಧಿಪೂರ್ವಕ ನಿಶ್ಚಯವೆಂಬ ಭಾಗ್ಯವನ್ನು ಪಡೆದು ದೇವರು ತಿಳಿಸಿರುವ ಮರ್ಮವನ್ನು ಅಂದರೆ ತನ್ನಲ್ಲೇ ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳನ್ನೆಲ್ಲಾ ಅಡಗಿಸಿಕೊಂಡಿರುವ ಕ್ರಿಸ್ತನನ್ನು ತಿಳುಕೊಂಡವರಾಗಿ ಹೃದಯದಲ್ಲಿ ದೃಢವಾಗಿರಬೇಕೆಂಬ ಕುತೂಹಲವು ನನಗುಂಟು.**

## 10.10. ದೇವರ ಸರ್ವಸಂಪೂರ್ಣತೆ

ಕೊಲೊಸ್ಸೆಯವರಿಗೆ 1:19

**ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ ನಿಷ್ಕರ್ಷೆ ಮಾಡಿದನು.**

ಕೊಲೊಸ್ಸೆಯವವರಿಗೆ 2:9,10

**ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ. ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ.**

ಸಂಪೂರ್ಣತೆ – "ಪ್ಲೆರೊಮಾ" (ಗ್ರೀಕ್‌ನಲ್ಲಿ) = ಕಂಠಪೂರ್ತಿ ಅಥವಾ ಪೂರ್ಣಗೊಂಡ, ತುಂಬುವಂತದ್ದು, (ವಿಷಯಗಳು, ಪೂರಕ, ಭರ್ತಿಗೊಂಡ, ಬಹುಸಂಖ್ಯೆಯ) ತುಂಬಿಸಲು ಹಾಕಲಾಗಿರುವಂತದ್ದು.

ಸಮಗ್ರ "ಪ್ಲೆರೊ" (ಗ್ರೀಕ್‌ನಲ್ಲಿ) ತುಂಬುವಂತೆ ಮಾಡುವ, ಒಳಗೆ ತುಂಬಿಸುವ, ಮಟ್ಟದವರೆಗೆ ಒದಗಿಸುವಂತೆ (ಅಥವಾ ವ್ಯಾಪಿಸುವ, ಪ್ರಸರಿಸುವ, ಪ್ರಭಾವಿಸುವ) ಪೂರೈಸು, ತುಂಬಿಸು.

ಯೋಹಾನ 1:16

**ನಾವೆಲ್ಲರು ಅತನ ಪರಿಪೂರ್ಣತೆಯೊಳಗಿಂದ ಕೃಪೆಯ ಮೇಲೆ ಕೃಪೆಯನ್ನು ಹೊಂದಿದೆವು.**

ನಾವು ಕ್ರಿಸ್ತನಲ್ಲಿ ಪರಿಪೂರ್ಣವಾಗಿ ತುಂಬಿಸಲ್ಪಟ್ಟಿದ್ದೇವೆ

ಎಫೆಸದವರಿಗೆ 3:14–19

**ಹೀಗಿರಲಾಗಿ ಯಾವ ತಂದೆಯಿಂದ ಭೂಪರಲೋಕಗಳಲ್ಲಿರುವ ಪ್ರತಿ ಜನವೂ ಹೆಸರು ತೆಗೆದುಕೊಳ್ಳುತ್ತದೋ ಆ ತಂದೆಯ ಮುಂದೆ ನಾವು ಮೊಣಕಾಲೂರಿಕೊಂಡು– ನೀವು ದೇವರಾತ್ಮನ ಮೂಲಕ ಆತಂರ್ಯದಲ್ಲಿ ವಿಶೇಷಬಲ ಹೊಂದಿದವರಾಗುವ ಹಾಗೆಯೂ ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ; ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಅಗಲ ಉದ್ದ ಆಳ ಎಷ್ಟೆಂಬದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲೂ ಪೂರ್ಣಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ.**

ಎಫೆಸದವರಿಗೆ 4:13

**ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ...**

ಕ್ರಿಸ್ತನಲ್ಲಿರುವ ದೇವರ ಪರಿಪೂರ್ಣತೆ ನಮ್ಮಲ್ಲಿಯೂ ಇದೆ ಮತ್ತು ನಮ್ಮಲ್ಲಿ ತೋರಿಸಲ್ಪಟ್ಟಿದೆ.

ಎಫೆಸದವರಿಗೆ ಪತ್ರಿಕೆಯಲ್ಲಿ "ದೇವರ ಪರಿಪೂರ್ಣತೆ" ಮತ್ತು "ಕ್ರಿಸ್ತನ ಪರಿಪೂರ್ಣತೆ" ಎಂಬುದು ಸಮಾನಾರ್ಥಕವಾದ ಪದಗಳಾಗಿವೆ. ಕ್ರಿಸ್ತನ ಪರಿಪೂರ್ಣತೆಯು ತೋರಿಸಲ್ಪಟ್ಟಿರುವುದು ಆತನು ಈ ಲೋಕದಲ್ಲಿ ನಡೆದ ಜೀವಿತದಲ್ಲಿ.

## 10.11. ಎಲ್ಲಾ ವಾಗ್ದಾನಗಳಿಗೆ ಹೌದು ಎನ್ನುವುದು

2 ಕೊರಿಂಥದವರಿಗೆ 1:19, 20

**ನಾವು ಅಂದರೆ ನಾನೂ ಸಿಲ್ವಾನನೂ ತಿಮೊಥೆಯನೂ ನಿಮ್ಮಲ್ಲಿ ಪ್ರಸಿದ್ಧಿಪಡಿಸಿದ ದೇವರ ಮಗನಾದ ಯೇಸು ಕ್ರಿಸ್ತನು ಹೌದೆಂತಲೂ, ಅಲ್ಲವೆಂತಲೂ ಎರಡು ಪ್ರಕಾರವಾಗಿರಲಿಲ್ಲ. ಹೌದೆಂಬದೇ ನೆಲೆಗೊಂಡಿದೆ. ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲೇ ದೃಢವಾಗುತ್ತವೆ. ಆದಕಾರಣ ದೇವರ ಪ್ರಭಾವವು ಪ್ರಕಾಶವಾಗುವದಕ್ಕೋಸ್ಕರ ಆತನ ಮೂಲಕವಾಗಿ ನಾವು ಆಮೆನ್ ಎಂದು ಹೇಳುತ್ತೇವೆ.**

ದೇವರ ಪ್ರತಿಯೊಂದು ವಾಗ್ದಾನಗಳು ನಮ್ಮ ಜೀವಿತದಲ್ಲಿ ನೆರವೇರುವಂತೆ ನೋಡುವಂತದ್ದು ನಮ್ಮ ಬಾಧ್ಯತೆಯಾಗಿದೆ. ಆದಕಾರಣ ದೇವರು ನಮ್ಮಲ್ಲಿ ಮಹಿಮೆ ಹೊಂದುತ್ತಾನೆ.

## 10.12. ಯಾವುದೇ ಕುರುಡತನ ಇಲ್ಲ

2 ಕೊರಿಂಥದವರಿಗೆ 3:14

**ಆದರೆ ಅವರ ಬುದ್ಧಿ ಮಂದವಾಯಿತು; ಈ ದಿನದ ವರೆಗೂ ಹಳೇ ಒಂಡಂಬಡಿಕೆಯು ಪಾರಾಯಣವಾಗುವಾಗ ಅದು ಕ್ರಿಸ್ತನಲ್ಲಿ ಗತಿಸಿಹೋಗುತ್ತದೆಂಬದು ಅವರಿಗೆ ಪ್ರಕಟವಾಗದೆ ಇರುವದರಿಂದ ಅದೇ ಮುಸುಕು ಎತ್ತಲ್ಪಡದೆ ಇರುತ್ತದೆ.**

ಯಾವುದು ಕತ್ತಲೆಯಲ್ಲಿತ್ತೋ ಈಗ ಅದು ಬೆಳಕಿಗೆ ತೋರಿಬಂದಿದೆ. ಹಳೆ ಒಡಂಬಡಿಕೆಯ ಪ್ರವಾದನೆಗಳು ಆತನಲ್ಲಿ ಪರಿಪೂರ್ಣವಾಗಿ ನೆರವೇರಿವೆ.

## 10.13. ಕ್ರಿಸ್ತನಲ್ಲಿರುವ ಸರಳತೆ

2 ಕೊರಿಂಥದವರಿಗೆ 11:3

**ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟುಹೋದೀತೆಂದು ನನಗೆ ಭಯವುಂಟು.**

ಗ್ರೀಕ್ ಭಾಷೆಯಲ್ಲಿ **"ಹ್ಯಾಪಲೊಟಸ್"** = ಸರಳತೆ

= ಒಂಟಿತನ, ಸರಳತೆ, ಪ್ರಾಮಾಣಿಕತೆ, ಮಾನಸಿಕ ನ್ಯಾಯಪರತೆ.

= ತೋರಿಕೆ, ಕಪಟಾಚಾರದಿಂದ ದೂರವಾಗಿ ಸದ್ಗುಣ ಹೊಂದಿರುವುದು.

= ಸ್ವ ಇಚ್ಛೆಯಂತೆ ನಡೆಯದೆ ತೆರದ ಮನಸ್ಸಿನಿಂದ ಉದಾರತೆ ತೋರಿಸುವಂತದ್ದು.

1 ತಿಮೊಥೆಯನಿಗೆ 1:14
**ನಮ್ಮ ಕರ್ತನ ಕೃಪೆಯು ಅತ್ಯಧಿಕವಾಗಿದ್ದು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯನ್ನೂ ಪ್ರೀತಿಯನ್ನೂ ನನ್ನಲ್ಲಿ ಉಂಟುಮಾಡಿತು.**

2 ತಿಮೊಥೆಯನಿಗೆ 1:13
**ನೀನು ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯೂ ಪ್ರೀತಿಯೂ ಉಳ್ಳವನಾಗಿ ನನ್ನಿಂದ ಕೇಳಿದ ಸ್ವಸ್ಥಬೋಧನಾ ವಾಕ್ಯಗಳನ್ನು ಮಾದರಿಮಾಡಿಕೊಂಡು ಅನುಸರಿಸು.**

ಕ್ರಿಸ್ತನಲ್ಲಿರುವ ಜೀವನ ಸರಳವಾದದ್ದು. ನಾವು ಕ್ರಿಸ್ತನಲ್ಲಿರುವ ಸರಳವಾದ ನಂಬಿಕೆ ಮತ್ತು ಪ್ರೀತಿಯಲ್ಲಿ ನಡೆಯುವಂತವರಾಗಿರಬೇಕು.

## 10.14. ಅಬ್ರಹಾಮನ ಒಡಂಬಡಿಕೆಯಲ್ಲಿ ವಾರಸುದಾರರಾಗಿದ್ದೇವೆ.

ಗಲಾತ್ಯದವರಿಗೆ 3:16, 17, 29
**ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ. ನನ್ನ ತಾತ್ಪರ್ಯವೇನೆಂದರೆ, ದೇವರು ಮೊದಲು ಸ್ಥಿರಪಡಿಸಿದ ಒಡಂಬಡಿಕೆಯನ್ನು ನಾನೂರ – ಮೂವತ್ತು ವರುಷಗಳ ಮೇಲೆ ಬಂದ ಧರ್ಮಶಾಸ್ತ್ರವು ರದ್ದು ಮಾಡಿ ಆ ವಾಗ್ದಾನವನ್ನು ವ್ಯರ್ಥ ಮಾಡುವುದಿಲ್ಲ. ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರು ಆಗಿದ್ದೀರಿ.**

ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳ ಆಶೀರ್ವಾದಗಳು ಈ ದಿನ ನಮ್ಮವುಗಳಾಗಿವೆ.

- ಎಲ್ಲಾ ವಿಷಯಗಳಲ್ಲಿ ಆಶೀರ್ವಾದಗಳು–ಅಂದರೆ ಜೀವಿತದ ಪ್ರತಿಯೊಂದು ಕ್ಷೇತ್ರಗಳಲ್ಲೂ ಆಶೀರ್ವಾದಗಳು (ಆದಿಕಾಂಡ 12:1–3; 24:1, 35; ಧರ್ಮೋಪದೇಶಕಾಂಡ 8:18).
- ಅನೇಕ ದೇಶಗಳಿಗೆ ಆಶೀರ್ವಾದದ ನಿಧಿಯಾಗಿರುವಂತೆ ಆಶೀರ್ವದಿಸಲ್ಪಟ್ಟಿದ್ದೇವೆ (ಆದಿಕಾಂಡ 12:1–3).

- ನಂಬಿಕೆಯಿಂದ ನೀತಿವಂತರಾಗಿದ್ದೇವೆ (ರೋಮಾಪುರದವರಿಗೆ 4:3).
- ದೇವರೊಂದಿಗೆ ಸ್ನೇಹಿತರಾಗಿದ್ದೇವೆ (ಯಾಕೋಬನು 2:23).
- ವೈರಿಗಳ ಮೇಲೆ ಜಯ (ಆದಿಕಾಂಡ 22:16, 17).

## 10.15. ಶಕ್ತಗೊಳಿಸುವ ಕೃಪೆ

2 ತಿಮೊಥೆಯನಿಗೆ 2:1

**ನನ್ನ ಮಗನೇ, ನೀನು ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಿಂದ ಬಲಹೊಂದಿದವನಾಗು.**

## 10.16. ಪುನರುತ್ಥಾನ

1 ಕೊರಿಂಥದವರಿಗೆ 15:22

**ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು.**

1 ಥೆಸಲೋನಿಕದವರಿಗೆ 4:16

**ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು.**

# ಅಧ್ಯಾಯ 11

## ಕ್ರಿಸ್ತನಲ್ಲಿರುವ ಜೀವಿತವನ್ನು ಜೀವಿಸುವುದು

2 ಕೊರಿಂಥದವರಿಗೆ 5:17, 18

**ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು. ಇದೆಲ್ಲಾ ದೇವರಿಂದಲೇ ಉಂಟಾದದ್ದು. ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನಪಡಿಸಿಕೊಂಡು ಸಮಾಧಾನ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ;**

ಯೇಸುವನ್ನು ಯಥಾರ್ಥವಾಗಿ ಸ್ವೀಕರಿಸಿ ಆತನ ಮೇಲೆ ನಂಬಿಕೆ ಇಟ್ಟ ಕಾರಣ, ಕ್ರಿಸ್ತನೊಂದಿಗೆ ನಮ್ಮನ್ನು ಐಕ್ಯಗೊಳಿಸಿ ಕರೆತರುವುದರ ಮೂಲಕ ದೇವರು ಈ ಅದ್ಭುತವಾದ ಸಂಗತಿಗಳನ್ನು ನಮಗೊಸ್ಕರವಾಗಿ ಮತ್ತು ನಮ್ಮಲ್ಲಿ ಮಾಡಿದ್ದಾನೆ. ದೇವರು ಕ್ರಿಸ್ತಯೇಸುವಿನಲ್ಲಿ ನಮಗೋಸ್ಕರ ಮಾಡಿರುವಂತದೆಲ್ಲವೂ ಆತ್ಮಿಕವಾದ ನಿಜರೂಪದ ಸಂಗತಿಗಳಾಗಿವೆ. ನಾವು ಇದಕ್ಕೆ ಸೇರಿಸುವಂತದ್ದರಲ್ಲಿ ಏನು ಇಲ್ಲ.

ಇಬ್ರಿಯರಿಗೆ 13:21

**ನೀವು ತನ್ನ ಚಿತ್ತವನ್ನು ನೆರವೇರಿಸುವ ಹಾಗೆ ಸಕಲಸತ್ಕಾರ್ಯಗಳಿಗೆ ಬೇಕಾದ ಅನುಕೂಲತೆಯನ್ನು ನಿಮಗೆ ಅನುಗ್ರಹಿಸಲಿ. ಆತನು ಯೇಸು ಕ್ರಿಸ್ತನ ಮೂಲಕ ತನಗೆ ಸಮರ್ಪಕವಾದದ್ದನ್ನು ನಮ್ಮಲ್ಲಿ ನಡಿಸಲಿ. ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ. ಆಮೆನ್.**

ಕ್ರಿಸ್ತಯೇಸುವಿನ ಮೂಲಕ ದೇವರು ನನ್ನಲ್ಲಿ ಕಾರ್ಯ ಮಾಡುತ್ತಿದ್ದಾನೆ!

### ಗಮನಿಸಬೇಕಾದ ಕೆಲವು ಪ್ರಶ್ನೆಗಳು

- ಕ್ರಿಸ್ತನಲ್ಲಿ ದೇವರು ನನಗೋಸ್ಕರವಾಗಿ ಮಾಡಿರುವಂತದ್ದರಲ್ಲಿ ಮತ್ತು ಕ್ರಿಸ್ತನಲ್ಲಿ ನನಗಾಗಿ ಕೊಡಲ್ಪಟ್ಟಿರುವುದರಲ್ಲಿ, ದೇವರು ನನ್ನಿಂದ ಏನನ್ನು ಮಾಡಲು ಅಪೇಕ್ಷಿಸುತ್ತಾನೆ?
- ಕ್ರಿಸ್ತನಲ್ಲಿಯ ಜೀವಿತವನ್ನು ನಡೆಸುವುದಕ್ಕೆ ನಾವು ಮಾಡಬೇಕಾದದ್ದು ಏನು?
- ಕ್ರಿಸ್ತನೊಂದಿಗೆ ಇರುವ ನನ್ನ ಐಕ್ಯತೆಯನ್ನು ಹೇಗೆ ಪ್ರಯೋಗಿಸುವುದು?
- ಕ್ರಿಸ್ತನಲ್ಲಿ ದೇವರು ನನಗೋಸ್ಕರವಾಗಿ ಮಾಡಿರುವಂತದನ್ನು ನನ್ನ ದೈನಂದಿನ ಜೀವಿತದಲ್ಲಿ ಹೇಗೆ ಅನುಭವಿಸಲಿ?

ಕೊಲೊಸ್ಸೆಯವರಿಗೆ 2:6–10
**ಆದದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಅತನಲ್ಲಿದ್ದವರಾಗಿ ನಡೆದುಕೊಳ್ಳಿರಿ. ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರಮಾಡುವವರಾಗಿರಿ. ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನೂ ಪ್ರಾಪಂಚಿಕಬಾಲಬೋಧೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರ್ರಿ. ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ, ಮತ್ತು ನೀವು ಆತನಲ್ಲಿದ್ದು ಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ.**

## 11.1. ಆತನಲ್ಲಿ ನಡೆಯಬೇಕು

ಕೊಲೊಸ್ಸೆಯವರಿಗೆ 2:6
**ಆದದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಅತನಲ್ಲಿದ್ದವರಾಗಿ ನಡೆದುಕೊಳ್ಳಿರಿ.**

ಗ್ರೀಕ್ ಭಾಷೆಯಲ್ಲಿ **"ಪೆರಿಪಾಟಿಯೊವೂ"** (ನಡೆ) ಅಂದರೆ = ಸುತ್ತಲೂ ನಡೆ, ಜೀವಿಸು, ಹಿಂಬಾಲಿಸು ಮತ್ತು ಅದರಲ್ಲೇ ತಲ್ಲೀನವಾಗಿರು, ಹೋಗು, ನಿರತನಾಗಿರು.

ಅಪೊಸ್ತಲರ ಕೃತ್ಯಗಳು 17:28
**ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ. ನಿಮ್ಮ ಕವಿಗಳಲ್ಲಿಯೂ ಕೆಲವರು– ನಾವು ಆತನ ಸಂತಾನದವರೇ ಎಂಬದಾಗಿ ಹೇಳಿದ್ದಾರೆ.**

1 ಯೋಹಾನನು 2:5, 6
**ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆಂಬದನ್ನು ತಿಳುಕೊಳ್ಳುತ್ತೇವೆ. ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ.**

ಯೇಸು ಕ್ರಿಸ್ತನು ಹೇಗೆ ತಂದೆಯೊಂದಿಗೆ ಅನ್ಯೋನ್ಯತೆಯಲ್ಲಿ ನಡೆದನೋ ಹಾಗೆಯೇ ನಾವು ಸಹ ಕ್ರಿಸ್ತನೊಂದಿಗೆ ಅನ್ಯೋನ್ಯತೆಯಲ್ಲಿ ನಡೆಯಬೇಕು.

ಯೋಹಾನ 5:19, 20
**ಅದಕ್ಕೆ ಯೇಸು ಅವರಿಗೆ– ನಿಮಗೆ ನಿಜನಿಜವಾಗಿ ಹೇಳುತ್ತೇನೆ, ತಂದೆಯು ಮಾಡುವದನ್ನು ಕಂಡು ಮಗನು ಮಾಡುತ್ತಾನೆ ಹೊರತು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು; ಆತನು ಮಾಡುವದನ್ನೆಲ್ಲಾ ಹಾಗೆಯೇ ಮಗನೂ ಮಾಡುತ್ತಾನೆ. ತಂದೆಯು ಮಗನ ಮೇಲೆ ಮಮತೆಯಿಟ್ಟು**

**ತಾನು ಮಾಡುವವುಗಳನ್ನೆಲ್ಲಾ ಅವನಿಗೆ ತೋರಿಸುತ್ತಾನೆ. ಇದಲ್ಲದೆ ಇವುಗಳಿಗಿಂತ ದೊಡ್ಡ ಕೆಲಸಗಳನ್ನು ಅವನಿಗೆ ತೋರಿಸುವನು; ಅವುಗಳನ್ನು ನೋಡಿ ನಿಮಗೆ ಆಶ್ಚರ್ಯವಾಗುವದು.**

ಯೋಹಾನ 8:28, 29

**ಹೀಗಿರಲಾಗಿ ಯೇಸು– ನೀವು ಮನುಷ್ಯಕುಮಾರನನ್ನು ಎತ್ತರದಲ್ಲಿಟ್ಟಾಗ ಇವನೇ ಅತನೆಂದೂ ತನ್ನಷ್ಟಕ್ಕೆ ತಾನೇ ಏನೂ ಮಾಡದೆ ತಂದೆಯು ತನಗೆ ಬೋಧಿಸಿದ ಹಾಗೆ ಅದನ್ನೇಲ್ಲಾ ಮಾತಾಡಿದನೆಂದೂ ನನ್ನ ವಿಷಯವಾಗಿ ನಿಮಗೆ ತಿಳಿಯುವದು. ನನ್ನನ್ನು ಕಳುಹಿಸಿಕೊಟ್ಟಾತನು ನನ್ನ ಸಂಗಡ ಇದ್ದಾನೆ, ನಾನು ಅತನಿಗೆ ಮೆಚ್ಚಿಕೆಯಾದದ್ದನ್ನು ಯಾವಾಗಲೂ ಮಾಡುವದರಿಂದ ಆತನು ನನ್ನನ್ನು ಒಂಟಿಗನಾಗಿ ಬಿಡಲಿಲ್ಲ ಅಂದನು.**

ಪೌಲನು ಕ್ರಿಸ್ತನಲ್ಲಿದ್ದ ತನ್ನ “ನಡೆ” ಯ ಬಗ್ಗೆ ಮಾತನಾಡಿದ್ದಾನೆ.

- ಕ್ರಿಸ್ತನಲ್ಲಿ ನನ್ನ ಮಾರ್ಗಗಳು – “ಈ ನಿಮಿತ್ತದಿಂದ ಕರ್ತನಲ್ಲಿ ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿಕೊಟ್ಟಿದ್ದೇನೆ. ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ. ಅವನು ಕ್ರಿಸ್ತನ ಸೇವೆಯಲ್ಲಿರುವ ನನ್ನ ನಡಾವಳಿಯನ್ನು ಅಂದರೆ ನಾವು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ನಿಮ್ಮ ನೆನಪಿಗೆ ತರುವನು.” (1 ಕೊರಿಂಥದವರಿಗೆ 4:17)
- ನಾವು ಕ್ರಿಸ್ತನ ಸಮಕ್ಷಮದಲ್ಲಿ ಮಾತನಾಡುತ್ತೇವೆ– “ಆದರೆ ನಾವು ದೇವರ ವಾಕ್ಯವನ್ನು ಕಲಬೆರಿಕೆಮಾಡುವವರಾದ ಹೆಚ್ಚು ಪಾಲಿನ ಜನರ ಹಾಗಿರದೆ ನಿಷ್ಕಪಟಿಗಳಾಗಿ ದೇವರಿಂದ ಉಪದೇಶಹೊಂದಿದವರಿಗೆ ತಕ್ಕ ಹಾಗೆ ಕ್ರಿಸ್ತನ ಅನ್ಯೋನ್ಯತೆಯುಲ್ಲಿದ್ದುಕೊಂಡು ದೇವರ ಸಮುಕ್ಷಮುದಲ್ಲಿಯೇ ಮಾತಾಡುತ್ತೇವೆ.” (2 ಕೊರಿಂಥದವರಿಗೆ 2:17) “ಆ ಸಾಕ್ಷಿಯನ್ನು ಪ್ರಸಿದ್ಧಿಪಡಿಸುವಕ್ಕಾಗಿಯೇ ನಾನು ಸಾರುವವನಾಗಿಯುೂ ಅಪೊಸ್ತಲನಾಗಿಯೂ ನಂಬಿಕೆಯಿಂದಲೂ ಸತ್ಯದಿಂದಲೂ ಅನ್ಯಜನರಿಗೆ ಬೋಧಿಸುವವನಾಗಿಯೂ ನೇಮಿಸಲ್ಪಟ್ಟೆನು. ನಾನು ಇಂಥವನೆಂಬದು ಸುಳ್ಳಲ್ಲ, ಸತ್ಯವೇ. (1 ತಿಮೊಥೆಯನಿಗೆ 2:7).
- ಕ್ರಿಸ್ತನಲ್ಲಿ ನನ್ನ ಸೆರೆ– “ನಾನು ಸುವಾರ್ತೆಯ ನಿಮಿತ್ತ ಸೆರೆಯಲ್ಲಿರಲಾಗಿ ನಿನಗೆ ಬದಲಾಗಿ ಅವನು ನನಗೆ ಉಪಚಾರಮಾಡುವಂತೆ ಅವನನ್ನು ನನ್ನ ಬಳಿಯಲ್ಲೇ ಇಟ್ಟುಕೊಳ್ಳಬೇಕೆಂದು ಯೋಚಿಸಿದ್ದೆನು.” (ಫಿಲೆಮೋನ 1:13); “ಕ್ರಿಸ್ತ ಯೇಸುವಿನ ನಿಮಿತ್ತವಾಗಿ ನನ್ನ ಜೊತೆ ಸೆರೆಯವನಾದ ಎಪಫ್ರನೂ ನನ್ನ ಸಹಕಾರಿಗಳಾದ ಮಾರ್ಕ ಅರಿಸ್ತಾರ್ಕ ದೇಮ ಲೂಕರೂ ನಿನ್ನನ್ನು ವಂದಿಸುತ್ತಾರೆ.” (ಫಿಲೆಮೋನ 1:23).

- ಕ್ರಿಸ್ತನಲ್ಲಿ ನನ್ನ ಧೈರ್ಯ ಅಥವಾ ದಿಟ್ಟತೆ – "ಆದಕಾರಣ ನಿನಗೆ ಯುಕ್ತವಾದದ್ದನ್ನು ಆಜ್ಞಾಪಿಸುವದಕ್ಕೆ ನನಗೆ ಕಿಸ್ತನಲ್ಲಿ ಪೂರಾ ಅಧಿಕಾರವಿದ್ದರೂ.." (ಫಿಲೆಮೋನ 1:8).

ಈ ವಚನಗಳಲ್ಲಿ ಮತ್ತು ಇತರೆ ವಾಕ್ಯಗಳಲ್ಲಿ ಅಪೊಸ್ತಲನಾದ ಪೌಲನು ಕ್ರಿಸ್ತನಲ್ಲಿರುವುದರ ಕುರಿತು ಆಳವಾಗಿ ಅರ್ಥ ಮಾಡಿಕೊಂಡಿದ್ದರ ಕುರಿತು ನಾವು ನೋಡುತ್ತೇವೆ ಮತ್ತು ಕ್ರಿಸ್ತನೊಂದಿಗೆ ಆತನ ಐಕ್ಯತೆಯಲ್ಲಿ ಅವನು ಮಾಡಿದ್ದೆಲ್ಲವನ್ನು ಗ್ರಹಿಸಿದ್ದನ್ನು ನಾವು ನೋಡುತ್ತೇವೆ.

1 ಪೇತ್ರನು 3:16
**ಒಳ್ಳೇ ಮನಸ್ಸಾಕ್ಷಿಯುಳ್ಳವರಾಗಿರಿ; ಆಗ ಕ್ರಿಸ್ತನಲ್ಲಿರುವ ನಿಮ್ಮ ಒಳ್ಳೇ ನಡವಳಿಕೆಯನ್ನು ಕುರಿತು ಬೈಯುವವರು ನಿಮ್ಮನ್ನು ನಿಂದಿಸುವದಕ್ಕೆ ನಾಚಿಕೆಪಡುವರು.**

ಕ್ರಿಸ್ತನಲ್ಲಿರುವ ನಮ್ಮ ಒಳ್ಳೆಯ ನಡವಳಿಕೆಯನ್ನು ಕಾಪಾಡಿಕೊಳ್ಳಬೇಕಾಗಿದೆ.

1 ಕೊರಿಂಥದವರಿಗೆ 8:6
**ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ ಉಂಟಾದೆವು. ಮತ್ತು ನಮಗೆ ಒಬ್ಬನೇಕರ್ತ; ಆತನು ಯೇಸು ಕ್ರಿಸ್ತನೇ; ಆತನ ಮುಖಾಂತರ ಸಮಸ್ತವೂ ಉಂಟಾಯಿತು, ನಾವೂ ಅತನ ಮುಖಾಂತರ ಉಂಟಾದೆವು.**

ನಾವು ಈಗ ಏನಾಗಿದ್ದೇವೋ ಅದೇಲ್ಲವು ಆತನಿಂದಲೇ.

## 11.2. ಆತನಲ್ಲಿ ಬೇರೂರಿರಬೇಕು

ಕೊಲೊಸ್ಸೆಯವರಿಗೆ 2:7
**ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರಮಾಡುವವರಾಗಿರಿ.**

ಗ್ರೀಕ್(ರಿಜೋ) ಭಾಷೆಯಲ್ಲಿ ಬೇರೂರುವುದು (ಅಂದರೆ ಸ್ಥಿರವಾಗಿ ನಿಂತುಕೊಳ್ಳುವುದು.)

ಆತನಲ್ಲಿರುವ ನಮ್ಮಲ್ಲಿನ ಬೇರುಗಳು ಸ್ಥಿರವಾಗಿ ನೆಡಲ್ಪಡಬೇಕು.

ಯೇಸು ಕ್ರಿಸ್ತನ ವ್ಯಕ್ತಿತ್ವದಲ್ಲಿ ನಿಮ್ಮ ಬೇರುಗಳು ಆಳವಾಗಿ ಇರಲಿ. ಒಂದು ಪಂಗಡ, ಸೇವೆ, ದರ್ಶನ, ಮತ್ತು ಯಾವುದೇ ತರವಾದ ಭೋದನೆಯಲ್ಲಿ ಬೇರೂರದೆ ಕ್ರಿಸ್ತನ ವ್ಯಕ್ತಿತ್ವದಲ್ಲಿ ಬೇರೂರಬೇಕು.

## 11.3. ಆತನಲ್ಲಿ ನಿರ್ಮಿಸಲಾಗಿದೆ

ಕೊಲೊಸ್ಸೆಯದವರಿಗೆ 2:7

**ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರಮಾಡುವವರಾಗಿರಿ.**

ಗ್ರೀಕ್(ಎಪಿಕೊಡೊಮಿಯಾ) ಭಾಷೆಯಲ್ಲಿ ನಿರ್ಮಿಸಲ್ಪಟ್ಟಿರುವುದು = ಕಟ್ಟಲ್ಪಡುವುದು, ಮತ್ತು ನೆಟ್ಟಗೆ ನಿಲ್ಲುವುದು, ಸಾಂಕೇತಿಕವಾಗಿ ನಿರ್ಮಿಸುವುದು

ಕ್ರಿಸ್ತನಲ್ಲಿನ ಅತ್ಮಿಕ ಅಭಿವೃದ್ಧಿಯ ಬಗ್ಗೆ ವಿಧ ವಿಧವಾದ ಹಂತಗಳಿವೆ.

- ಆತ್ಮಿಕವಾಗಿ ಹುಟ್ಟುವುದು– "ನಿಮಗೆ ಕ್ರಿಸ್ತನಲ್ಲಿ ಉಪಾಧ್ಯಾಯರು ಹತ್ತು ಸಾವಿರ ಮಂದಿ ಇದ್ದರೂ ತಂದೆಗಳು ಬಹುಮಂದಿ ಇಲ್ಲ; ನಾನೇ ನಿಮ್ಮನ್ನು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುಸುವಿನಲ್ಲಿ ಪಡೆದೆನು" (1 ಕೊರಿಂಥದವರಿಗೆ 4:15).
- ಕ್ರಿಸ್ತನಲ್ಲಿ ಹಸುಮಕ್ಕಳು– "ಸಹೋದರರೇ, ನಾನಂತೂ ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಲಾರದೆ ಪ್ರಾಪಂಚಿಕರೂ ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳೂ ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು" (1 ಕೊರಿಂಥದವರಿಗೆ 3:1).
- ಕ್ರಿಸ್ತನಲ್ಲಿ ಪ್ರವೀಣರು– "ನಾವು ಆತನನ್ನು ಪ್ರಸಿದ್ಧಿಪಡಿಸುವವರಾಗಿ ಸಕಲರಿಗೂ ಬುದ್ಧಿ ಹೇಳುತ್ತಾ ಸರ್ವರಿಗೂ ಪೂರ್ಣಜ್ಞಾನವನ್ನು ಉಪದೇಶಿಸುತ್ತಾ ದೇವರ ಮುಂದೆ ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ" (ಕೊಲೊಸ್ಸೆಯವರಿಗೆ 1:28).

ಎಫೆಸದವರಿಗೆ 4:13

**ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ...**

ಎಫೆಸದವರಿಗೆ 4:15

**ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು.**

## 11.4. ಕ್ರಿಸ್ತನಲ್ಲಿ ನೆಲೆಯಾಗಿರುವುದು

ಯೋಹಾನ 15:1–8

**ನಾನೇ ನಿಜವಾದ ದ್ರಾಕ್ಷೇಬಳ್ಳಿ. ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. ನೀವು ನನ್ನಲ್ಲಿ ನೆಲೆಗೊಂಡಿರ್ರಿ,. ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ. ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟು ಹೋಗುತ್ತವೆ. ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು. ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ.**

ನೆಲೆಗೊಂಡಿರು **"ಮೆನೊ"** (ಗ್ರೀಕ್ ಭಾಷೆಯಲ್ಲಿ) = ಒಂದು ಪ್ರಾಥಮಿಕ ಕ್ರಿಯಾಪದ. ಉಳಿದುಕೊಳುವುದು (ಒಂದು ನಿರ್ದಿಷ್ಟ ಸ್ಥಳದಲ್ಲಿ, ರಾಜ್ಯದಲ್ಲಿ, ಪ್ರತೀಕ್ಷೆ ಅಥವಾ ಸಂಬಂಧಿಸಿದಂತೆ) ಮುಂದುವರೆಸು, ವಾಸಿಸು, ಸಹಿಸು, ಹಾಜರಾಗಿರು, ಉಳಿದಿರು, ನಿಲ್ಲು, ಕಾಯ್ದಿರು, ಮುಂತಾದವು.

1 ಯೋಹಾನನು 2:28

**ಪ್ರಿಯರಾದ ಮಕ್ಕಳೇ, ಅತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆಪಡದೆ ಧೈರ್ಯದಿಂದಿರುವಂತೆ ಆತನಲ್ಲಿ ನೆಲೆಗೊಂಡಿರೋಣ.**

1 ಯೋಹಾನನು 4:13

**ದೇವರು ನಮಗೆ ತನ್ನ ಆತ್ಮದಲ್ಲಿ ಪಾಲನ್ನು ಅನುಗ್ರಹಿಸಿದ್ದರಿಂದಲೇ ನಾವು ಆತನಲ್ಲಿ ನೆಲೆಗೊಂಡಿದ್ದೇವೆಂತಲೂ ಆತನು ನಮ್ಮಲ್ಲಿ ನೆಲೆಗೊಂಡಿದ್ದಾನೆಂತಲೂ ತಿಳಿದುಕೊಳ್ಳುತ್ತೇವೆ.**

1 ಯೋಹಾನನು 4:15

**ಯೇಸು ದೇವರ ಮಗನಾಗಿದ್ದಾನೆಂದು ಯಾವನು ಒಪ್ಪಿಕೊಂಡು ಹೇಳುತ್ತಾನೋ ಅವನಲ್ಲಿ ದೇವರು ನೆಲೆಗೊಂಡಿದ್ದಾನೆ. ಅವನು ದೇವರಲ್ಲಿ ನೆಲೆಗೊಂಡಿದ್ದಾನೆ.**

### 11.4.1. ನಾವು ಆತನಲ್ಲಿ ನೆಲೆಗೊಂಡಿರುವಾಗ ನಮ್ಮ ನಡತೆಯಲ್ಲಿ ಕೆಲವು ಗುಣಲಕ್ಷಣಗಳು ತೋರಿಬರುತ್ತವೆ.

(1) ಕ್ರಿಸ್ತನಲ್ಲಿರುವ ಮನಸ್ಸನ್ನು ನಾವು ಹೊಂದಿಕೊಳ್ಳುತ್ತೇವೆ–"ಕ್ರಿಸ್ತ ಯೆಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ" (ಫಿಲಿಪ್ಪಿಯವರಿಗೆ 2:5).

(2) ಎಲ್ಲಾ ವಿಷಯಗಳಲ್ಲಿ ಕೃತಜ್ಞತೆ ಸಲ್ಲಿಸುತ್ತೇವೆ–"ಎಲ್ಲಾದರಲ್ಲಿಯೂ ಕೃತಜ್ಞತಾ ಸ್ತುತಿಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿಬಂದ ದೇವರ ಚಿತ್ತ" (1 ಥೆಸಲೊನೀಕದವರಿಗೆ 5:18).

(3) ಆತ್ಮನಿಂದ ಭೋದಿಸಲ್ಪಡುತ್ತೆವೆ–"ಆದರೆ ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವದು ಅವಶ್ಯವಿಲ್ಲ. ಆತನು ಮಾಡಿದ ಅಭಿಷೇಕವು ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶಮಾಡುವಂಥದಾಗಿದ್ದು ಸತ್ಯವಾಗಿದೆ, ಸುಳ್ಳಲ್ಲ. ಅದು ನಿಮಗೆ ಉಪದೇಶ ಮಾಡಿದ ಪ್ರಕಾರ ಆತನಲ್ಲಿ ನೆಲೆಗೊಂಡಿರಿ" (1 ಯೋಹಾನನು 2:27).

(4) ನಾವು ವಿಧೇಯತೆಯಲ್ಲಿ ನಡೆಯುತ್ತೇವೆ–"ಆತನ ಅಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ, ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು" (1 ಯೋಹಾನನು 3:24).

(5) ನಾವು ಪರಿಶುದ್ಧತೆಯಲ್ಲಿ ನಡೆಯುತ್ತೇವೆ–"ಪಾಪಗಳನ್ನು ಹೋಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ. ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು; ಪಾಪಮಾಡುವವನು ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ" (1 ಯೋಹಾನನು 3:5, 6).

## 11.5. ಕ್ರಿಸ್ತ ಯೇಸುವಿನಲ್ಲಿ ನಿಮಗೆ ಇರುವ ಉತ್ತಮ ವಿಷಯಗಳನ್ನು ಗುರುತಿಸುವುದು.

ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ. (ಫಿಲೆಮೋನನಿಗೆ 1:6)

## ಅನ್ವಯ

1. ನಿನ್ನಲ್ಲಿರುವ ಪ್ರತಿಯೊಂದು ಒಳ್ಳೆಯ ವಿಷಯಗಳ ಕುರಿತು ಕ್ರಿಸ್ತ ಯೇಸುವಿನಲ್ಲಿ ಒಪ್ಪಿಕೊಳ್ಳಬೇಕು.
2. ನಿಮ್ಮ ಹಕ್ಕು ಮತ್ತು ಬಾಧ್ಯತೆಯನ್ನು ತಿಳಿದುಕೊಳ್ಳಿ, ಮತ್ತು ನಿಮ್ಮ ಅಸ್ತಿವಾರದ ಮೇಲೆ  ನಿಂತುಕೊಳ್ಳಿ.

# ಕ್ರಿಸ್ತನಲ್ಲಿ ನನ್ನ ಚಿತ್ರಣ

(ಕ್ರಿಸ್ತನಲ್ಲಿ ನೀವು ಏನಾಗಿರುವಿರಿ ಎಂಬುದನ್ನು ಬರೆಯಿರಿ)

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಟ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ
ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

‘‘**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**’’ (ಅಪೊಸ್ತಲರ ಕೃತ್ಯ 10:43)

‘‘**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**’’ (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ‘‘ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ’’ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಟಿಪ್ಪಣಿಗಳು

ಟಿಪ್ಪಣಿಗಳು

ನಾನು ಕ್ರಿಸ್ತನಲ್ಲಿ ಯಾರಾಗಿದ್ದೇನೆ

ನೀವು ಕ್ರಿಸ್ತನಲ್ಲಿ ಏನಾಗಿದ್ದೀರಾ ಎಂಬುದು ನೀವು ವಾಸ್ತವವಾಗಿ ಏನಾಗಿದ್ದೀರಾ ಎಂಬುದಾಗಿದೆ! ನೀವು ಕ್ರಿಸ್ತನಲ್ಲಿದ್ದೀರಾ ಮತ್ತು ನೀವು ಆತನ ಮಹಿಮೆ, ಆತನ ಸ್ವಾಸ್ಥ್ಯದಲ್ಲಿ ಆತನೊಂದಿಗೆ ಪಾಲು ತೆಗೆದುಕೊಳ್ಳುತ್ತೀರಿ. ಈ ಪುಸ್ತಕದ ಮೂಲಕ ಪರ್ಯಟನೆ ಮಾಡಿರಿ ಮತ್ತು ಕ್ರಿಸ್ತನಲ್ಲಿ ನಿಮ್ಮ ಸ್ವಾಸ್ಥ್ಯ ಮತ್ತು ನಿಜವಾದ ಗುರುತನ್ನು ಕಂಡುಹಿಡಿಯಿರಿ.

ಆಶೀಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

ಆಶೀಷ್ ರಾಯ್‌ಚೂರ್